# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXIII - 4 ಎಪ್ರಿಲ್ 2005

### ಈ ಸಂಚಿಕೆಯಲ್ಲಿ

ಅಸೋಸಿಯೇಷನ್‌ನಲ್ಲಿ :

| | | |
|---|---|---|
| Stree Gaanam | • *Badrinathan* | 2 |
| Forthcoming Programmes | | 3 |
| ಜಗ ಚೆಲುವೆನ್ನುವ ಬಗೆಗಳ ಅನುರಣನ : ಪು.ತಿ.ನ. ಸಂಸ್ಮರಣೆ | • ಡಾ. ತಾಳ್ತಜೆ ವಸಂತಕುಮಾರ | 4 |
| ಸಂದರ್ಶನ : | | |
| ಶ್ರೀಮತಿ ಮೀರಾ ಕುಲಕರ್ಣಿ | • ಭವಾನಿ | 5 |
| ಹರಿಹರನ ರಗಳೆಗಳು : ಸ್ತ್ರೀವಾದಿ ಓದಿನಲ್ಲಿ | • ಡಾ. ಎಚ್.ಎಸ್. ಶ್ರೀಮತಿ | 6 |
| ವಿಮರ್ಶೆಯ ಗಾಂಭೀರ್ಯ | • ಡಾ. ತಾಳ್ತಜೆ ವಸಂತಕುಮಾರ | 10 |
| ಆದರ್ಶ ನಗರ ಅಯೋಧ್ಯೆ | • ವಾಸುದೇವ ಕಾಣೆಮಾರ್ | 12 |
| ಬೀChi ಕನ್ನಡದ ದೀಕ್ಷೆ ಸ್ವೀಕರಿಸಿದ್ದು... | (ಆತ್ಮಕಥೆ - 'ನನ್ನ ಬಯಾಗ್ರಫಿ'ಯಲ್ಲಿ) | 14 |
| ಕವನ : | | |
| ಕವಿಯಾಗುವ ಹಾಡು - ಪಾಡು !! | • ಶೋಭಾ ಪ್ರಮೋದ್ | 14 |
| *South Indian Recipes for Ugadi* | *from Smt. Kamala Narsiwodeyar's book* | 15 |
| ಸುತ್ತಮುತ್ತ | | 15 |


**Rs. 5/-**

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# STREE GAANAM - SHOWCASING WOMEN COMPOSERS IN CARNATIC MUSIC.

***- Badrinathan***

The event Stree Gaanam, on women composers in Carnatic music, presented by Smt. Vasumathi Badrinathan, a Mumbai-based musician, was a highly successful and highly-rated event judged by the response of the musicians and rasikas besides other dignitaries who attended the event in Mumbai at the Mysore Association on March 7, 2005. The event was supported by the Department of Culture, Govt of India & hosed by The Mysore Association, Bombay.

According to Smt. Vasumathi Badrinathn, "Women have been making music since time immemorial. It was unlikely that there had been no woman composer for so many centuries. So the only other explanation was that they have just been ignored or were forced to hide their talent due to compulsions of the society". During the welcome address Mr. M. A. N Prasad, Secretary Mysore Association said "Because of the uniqueness of this event, at Mysore Association, we did not hesitate to best the event and what a better way to present Women composers than on the eve of International Women's Day!".

This event Stree Gaanam, recognised the works of 11 women composers spanning a period from the 8th century to the present day. "These women hail from Andhra, Karnataka, Kerala & Tamil Nadu. Their compositions are an interesting revelation of the poetry of their times, and an insight into the feminine mind" said Vasumathi. This included some of the bygone composers like Andal, Akka Mahadevi, Princess Rukmini Bai Tampuratti, Andavan Pichhai, Ambujam Krishna & Gidugu Lakshmikantamma. From the present day composers, Vasumathi presented Smt. Rajee Narayan, Smt. Suguna Purushotaman, Smt. Padma Veeraraghavan, Dr. Rukmini Ramani & Smt. Mangalam Ganapathy.

As part of the International Women's Day eve event, 3 women achievers from different walks of life and 3 women composers were also honored. Dr. Rukmini Ramani, Smt. Rajee Narayan and Smt Mangalam were present at the event and they were felicitated. According to Ms. Sanjeevanee Kutty, Secretary culture, tourism and MD of Film City - one of the guests of honor at the event "I am very honored and I congratulate Vasumathi Badrinathan on this excellent & befitting tribute to International Women's day. Extremely well researched, educational inspiring, experience". Dr. Poornima Advani, former chair person, National Commission for Women said in her speech, "A rare treat for my eyes which I have enjoyed. I compliment Vasumathi for the subject chosen. This is the first time I have heard of a programme dedicated to women composers". Another Guests of honor, the well known nutritionist & health activist Dr. Vijaya Venkat in her speech said, "I remember Nehru in front of MS "who am I, a mere Prime Minister in front of the queen of music" and further she said that "I shall always remember this evening".



Vasumathi performed with an all-women team comprising Ms. Mangala Vaidyanathan on the violin and Jayalakshmi Gopalakrishnan on the mridangam, along with a multi-media presentation of slides, video and audio clippings, interspersed with her talk and the music of the composers.

Many rasikas at the event praised the content, the presentation, the research work and the music. Sri. S. Seshadri of Shanmukananda & Sangeetha Sabha said, "In my 60+ years association with culture, I have never ever seen such an event presented by any artiste". According to Sri. Ramachandran of Music Triangle "the programme was excellently conceived and presented, very topical indeed! Lot of work has obviously gone into it. For a lay person like me, the treasure of our traditional music and compositions of great women folk was brought alive". Ms. Padma Ramamurthy of Chembur Fine Arts said "I confess I am awe struck by the artist, student, organiser, performer in Vasumathi. Stree Gaanam package was well thought of, neat and crisp. Vasumathi has clarity in thought and



executes the thought with amazing elan". Smt. Usha Sarangan, one of the rasikas said "It was not only very interesting but also very educative, innovative and inspiring!"

No musician has ever attempted the theme in the past. The event was very interesting and enjoyable. It was novel, inspiring, excellently conceived, researched, produced & presented in a sleek and classy way. Vasumathi is planning to present Stree Gaanam in other major metros soon.

Stree Gaanam will be remembered forever by all those who attended the event. •

## MATRIMONIAL

**Boy**

Well to do do family - Smarth Kannada Brahmin Divorcee

Date of Birth - 21.11.1971 (33 Yrs)

Ed. Qualification - M.B.A. - IIT

Height - 5-7" Fair complexion

Star - Mula (last Pada)

Expectation - girl should be between 25 to 29 years old. Graduate good - natured Brahmin, good family background

Preferably Mumbai based. Contact No. 2412 1228


FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

2/16, KABBUR HOUSE,
SION (E),
MUMBAI-400 022.
PHONES : 2407 2984*2409 3573
2407 7750


# The Mysore Association, Bombay

## FORTHCOMING PROGRAMMES

On Monday 18th April 2005 at Ground Floor Lounge

Rama Navami Celebrations

| | |
|---|---|
| 6.30 p.m. | Bhajans by Members |
| 7.00 p.m. | Pooja & Prasada Viniyoga |

On Wednesday 27th April 2005 at Ground Floor Lounge

| | |
|---|---|
| 7.00 p.m. | Sankashti Pooja |

On Wednesday 1st May 2005 at Ground Floor Lounge

**AKSHAYA TRITHIYA POOJA**



on the occasion of Ganapati Pratisthapana Anniversary

| | |
|---|---|
| 5.00 p.m. | Ganapathi Homa |
| 6.00 p.m. | Navagraha Pooja |
| 7.00 p.m. | Ganapathi Sahasranaama |
| 8.00 p.m. | Mahamangalrathi & Prasad Viniyoga |

## ಶಿವರಾತ್ರಿ

ಪ್ರತಿ ವರ್ಷದಂತೆ ಈ ವರ್ಷವೂ ಅಸೋಸಿಯೇಷನ್ನಿನಲ್ಲಿ ಶಿವರಾತ್ರಿಯ ಕಾರ್ಯಕ್ರಮವನ್ನು ಮಾರ್ಚ್ ೮ರಂದು ನಡೆಸಲಾಯಿತು. ಅಸೋಸಿಯೇಷನ್ನಿನ ಲಲಿತಾ ಕಲಾ ವಿಭಾಗದ ಸದಸ್ಯರಿಂದ ಭಜನಾ ಕಾರ್ಯಕ್ರಮವು ನಡೆಯಿತು. ಭಜನೆಯ ನಂತರ ಶ್ರೀಮತಿ ಭಾರತಿ ಪ್ರಸಾದ್ ಅವರು ಮಾತನಾಡಿ ಈ ಭಜನೆಯನ್ನು ಆರಂಭಿಸಿ ಅದು ಒಂದು ಸೂಕ್ತ ರೀತಿಯಲ್ಲಿ ನಡೆದು ಬರುವಂತೆ ಮಾರ್ಗದರ್ಶನವನ್ನು ಮಾಡಿಕೊಟ್ಟ ದಿ. ಶ್ರೀಮತಿ ಸೀತಮ್ಮ ರಾವ್ ಅವರನ್ನು ನೆನಪಿಸಿಕೊಂಡು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ನಂತರ ಈಶ್ವರನ ಪೂಜೆ ಅಷ್ಟೋತ್ತರ ಮಂಗಳಾರತಿ ಎಲ್ಲವೂ ಸಾಂಗವಾಗಿ ನೆರವೇರಿತು. ಮಂಗಳವಾರವಾಗಿದ್ದರಿಂದ ಗಣಪನಿಗೆ ವಿಶೇಷ ಪೂಜೆಯನ್ನು ನಡೆಸಲಾಯಿತು. ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಅಭಿನಂದನೆಗಳು

ಶ್ರೀ ಕಪ್ಪಣ್ಣ ಜಿ. ಶ್ರೀನಿವಾಸ ಅವರನ್ನು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರನ್ನಾಗಿಯೂ ಶ್ರೀ ವೆಂಕಟಾಚಲಪತಿ ಅವರನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗಿದೆ. ಈ ಇಬ್ಬರು ಶ್ರೀಯುತರೂ ಮೈಸೂರು ಅಸೋಸಿಯೇಷನ್ ಹಿತಚಿಂತಕರಾಗಿರುತ್ತಾರೆ. ಶ್ರೀ ಕಪ್ಪಣ್ಣ ಒಬ್ಬ ಬಹುಮುಖ ಪ್ರತಿಭೆಯ ವ್ಯಕ್ತಿ. ಇವರು ಅಸೋಸಿಯೇಶನ್‌ಗೆ ಅನೇಕ ಸಲ ನಾಟಕ ತಂಡ ಮತ್ತು ಸಂಗೀತಕಾರರುಗಳೊಡನೆ ಭೇಟಿ ಕೊಟ್ಟಿರುತ್ತಾರೆ. ಶ್ರೀ ವೆಂಕಟಾಚಲಪತಿಯವರೂ ಸಹ 2003ರಲ್ಲಿ ಮೈಸೂರು ಅಸೋಸಿಯೇಶನ್‌ನಲ್ಲಿ ಒಂದು ಭಿತ್ತಿ ಶಿಲ್ಪ ಕಮ್ಮಟವನ್ನು ನಡೆಸಿ ಅಸೋಸಿಯೇಶನ್‌ನ ಗೋಡೆಯಲ್ಲಿ ಸುಂದರ ಭಿತ್ತಿ ಶಿಲ್ಪವನ್ನು ಸಾಕಾರಗೊಳಿಸಿದ್ದಾರೆ. ಇವರಿಬ್ಬರಿಂದಲೂ ಕರ್ನಾಟಕದ ಸಾಂಸ್ಕೃತಿಕ ಪ್ರತಿಭೆ ಇನ್ನಷ್ಟು ಬೆಳಗುವಂತಾಗಲೆಂದು ಹಾರೈಸುತ್ತಾ ಮೈಸೂರು ಅಸೋಸಿಯೇಷನ್ ಸಮಸ್ತರ ಪರವಾಗಿ 'ನೇಸರು' ಅಭಿನಂದನೆಗಳನ್ನು ಸಲ್ಲಿಸುತ್ತದೆ.

# ಜಗ ಚೆಲುವೆನ್ನುವ ಬಗೆಗಳ ಅನುರಣನ : ಪು.ತಿ.ನ. ಸಂಸ್ಮರಣೆ

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಬೆಳ್ಳಿ ಹಬ್ಬದ ಸಂಭ್ರಮ

ಬೆಳ್ಳಿ ಹಬ್ಬದ ಬೆಳಕಿನಲ್ಲಿರುವ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು, ಇತ್ತೀಚೆಗೆ ಬೆಂಗಳೂರಿನ ಡಾ. ಪು.ತಿ.ನ. ಟ್ರಸ್ಟ್ ಮತ್ತು ಮುಂಬಯಿಯ ಕರ್ನಾಟಕ ಸಂಘ ಇವುಗಳ ಸಂಯುಕ್ತ ಸಹಯೋಗದೊಂದಿಗೆ ಮೂರು ದಿನಗಳ ವೈವಿಧ್ಯಮಯವಾದ ಕಾರ್ಯಕ್ರಮ ಗುಚ್ಛವೊಂದನ್ನು ಸಂಯೋಜಿಸಿತ್ತು.




ಡಾ. ಅರುಣ್ ಸಾವಂತ್ (ಪ್ರೊ.ವಿ.ಸಿ.), ಮುಂಬಯಿ ವಿಶ್ವವಿದ್ಯಾಲಯ ಇವರು ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರಾದ ದೊರೆಸ್ವಾಮಿಯವರನ್ನು ಸನ್ಮಾನಿಸುತ್ತಿದ್ದಾರೆ. ಡಾ. ಸನದಿ ಮತ್ತು ಡಾ. ತಾಳ್ತಜೆ ಜತೆಗಿದ್ದಾರೆ.

ಮುಂಬಯಿ ವಿಶ್ವವಿದ್ಯಾಲಯದ ಪ್ರ. ಕುಲಗುರು ಡಾ. ಅರುಣ ಸಾವಂತರಿಂದ ಉದ್ಘಾಟಿತವಾದ, ಪು.ತಿ.ನ ಸಂಸ್ಮರಣೆಯ ಸಮಾರಂಭದಲ್ಲಿ ಹಿರಿಯ ಕವಿ, ಡಾ. ಜಿ.ಎಸ್. ಶಿವರುದ್ರಪ್ಪನವರು, 'ಒಲವಿಗೆ ಒಲವಲ್ಲದೆ ಬೇರೆಯ ಬಗೆಯುಂಟೆ' ಎಂಬ ಅರ್ಥದಲ್ಲಿ ಕಾವ್ಯಾತ್ಮಕವಾಗಿ ಮಾತನಾಡಿ ದರಲ್ಲದೆ ಡಾ. ಪು.ತಿ.ನ. ಟ್ರಸ್ಟ್‌ನ ಅಧ್ಯಕ್ಷರ ನೆಲೆಯಿಂದ ಅದರ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಗೌರವ ಅತಿಥಿಗಳಾಗಿದ್ದ ಫ್ಲೋರೆಸ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಸದಾನಂದ ಶೆಟ್ಟಿಯವರು, ಭಾರತೀಯತೆಯೇ ನಮ್ಮ ಸರ್ವಸ್ವವಾಗಬೇಕು' ಎಂದು ಪ್ರತಿಪಾದಿಸಿದರಲ್ಲದೆ, ವಿಭಾಗದಲ್ಲಿ ಎರಡು ಲಕ್ಷ ರೂಪಾಯಿಗಳ ದತ್ತಿನಿಧಿಯೊಂದನ್ನು ಸ್ಥಾಪಿಸುವ ಆಶ್ವಾಸನೆಯನ್ನಿತ್ತರು. ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಬಿ.ಎ. ಸನದಿಯವರು ವಿಭಾಗದೊಂದಿಗೆ ತಮಗಿರುವ ಆಪ್ತ ಸಂಬಂಧಗಳನ್ನು ಜ್ಞಾಪಿಸಿಕೊಳ್ಳುತ್ತಾ ಅದರ ಕಾರ್ಯ ವಿಧಾನಗಳನ್ನು ಪ್ರಶಂಸಿಸಿದರು.

ಮುಂಬಯಿಯಲ್ಲಿ ಕನ್ನಡದ ಕೈಂಕರ್ಯಗಳಲ್ಲಿ ನಿರತವಾಗಿರುವ ''ಮೈಸೂರು ಅಸೋಸಿಯೇಷನ್'' ಮತ್ತು ''ಕರ್ನಾಟಕ ಸಂಘ''ಗಳನ್ನು ಸಮಾರಂಭದ ಸವಿ ನೆನಪಿಗಾಗಿ ಸನ್ಮಾನಿಸಲಾಯಿತು. ಅವುಗಳ ಅಧ್ಯಕ್ಷರುಗಳಾದ ಶ್ರೀ ದೊರೆಸ್ವಾಮಿ ಮತ್ತು ಶ್ರೀ ಎಂ. ಎಂ. ಕೋರಿಯವರು ಕೃತಜ್ಞತೆಯ ಮಾತುಗಳನ್ನಾಡಿದರು. ಹಾಗೆಯೇ ಅನನ್ಯ ಪ್ರಶಸ್ತಿ - ಗೌರವಗಳಿಗೆ ಪಾತ್ರರಾದ ಡಾ. ಬಿ.ಎ. ಸನದಿ ಹಾಗೂ ಶ್ರೀ ಶಿಮುಂಜೆ ಪರಾರಿ ಅವರೂ ಈ ಸಂದರ್ಭದಲ್ಲಿ ಸನ್ಮಾನಿತರಾದರು.

ಈ ಕಾರ್ಯಕ್ರಮ ಸರಣಿಯ ಎರಡನೆಯ ದಿನ, ಡಾ. ಎಚ್. ಎಸ್. ರಾಘವೇಂದ್ರರಾಯರು 'ಪು.ತಿ.ನ. ವಿಚಾರ ಸಂಕಿರಣ'ದ ಆಶಯ ಭಾಷಣವನ್ನು ಪ್ರಸ್ತುತ ಪಡಿಸುತ್ತಾ, ಪು.ತಿ.ನ. ಅವರ ಸಾಹಿತ್ಯ ಕೃಷಿಯ ಸೂಕ್ಷ್ಮ - ಸಫಲ ಸ್ಥಾನಗಳನ್ನು ವಿಶದ ಪಡಿಸುವುದರೊಂದಿಗೆ, ಸಾಂಪ್ರದಾಯಿಕವಾದ ಬಾಹ್ಯ ಆವರಣಿಕೆಯೊಳಗಿನ ಆಧುನಿಕವಾದ ವೈಚಾರಿಕ ನಿಲುವು ಅಲ್ಲಿ ಪ್ರವೃತ್ತವಾಗಿರುವ ರೀತಿಗಳನ್ನು ಮನಗಾಣಿಸಿದರು.

ಡಾ. ಶ್ರೀಮತಿ ಪ್ರಮೀಳಾ ಮಾಧವ ಅವರು ಪು.ತಿ.ನ. ಅವರ ಕಾವ್ಯಗಳ ಕುರಿತಾಗಿ, ರಂಗನಟ ಕೆ. ಮಂಜುನಾಥಯ್ಯ ಅವರು ಪು.ತಿ.ನ. ಅವರ ನಾಟಕಗಳ ಬಗ್ಗೆ ವಿಚಾರ ಮಂಡನೆ ಮಾಡಿದರು.

ಬಳಿಕ, ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರ ನಿರ್ದೇಶಕತ್ವದಲ್ಲಿ ನಡೆದ ''ಪು.ತಿ.ನ. ಕಾವ್ಯ''ದ ಬಗೆಗಿನ ''ಸಮೂಹ ಚಿಂತನ ಗೋಷ್ಠಿ''ಯಲ್ಲಿ ಶ್ರೀ ವೆಂಕಟೇಶ ಪೈ, ಶ್ರೀ ಶ್ರೀನಾಥ ಎಂ.ಪಿ., ಶ್ರೀಮತಿ ಶಾಮಲಾ ಮಾಧವ, ಶ್ರೀಮತಿ ಸುಮಾ ದ್ವಾರಕನಾಥ್ ಮತ್ತು ಶ್ರೀ ಮಣಿಯಪ್ಪ ನಾಟೇಕರ ಇವರು ಭಾಗವಹಿಸಿದರು.

ಅಪರಾಹ್ನ ಡಾ. ಜಿ.ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿ, ಶ್ರೀ ಅರವಿಂದ ನಾಡಕರ್ಣಿ, ಡಾ. ಬಿ.ಎ. ಸನದಿ, ಡಾ. ಜಿ.ವಿ. ಕುಲಕರ್ಣಿ, ಡಾ. ಸುನೀತಾ ಶೆಟ್ಟಿ ಮತ್ತು ಶ್ರೀ ಶಿಮುಂಜೆ ಪರಾರಿಯವರು ಕವನಗಳನ್ನು ವಾಚಿಸಿದರು. ಡಾ. ಜಿ.ಎಸ್. ಶಿವರುದ್ರಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪು.ತಿ.ನ. ಅವರನ್ನು ಹಿನ್ನೆಲೆಗಿಟ್ಟುಕೊಂಡು, ಆಧುನಿಕ ಕನ್ನಡ ಕಾವ್ಯ ಸ್ವರೂಪದ ಬಗೆಗೆ ಸ್ಪಷ್ಟವಾದ ಕಲ್ಪನೆಯನ್ನು ನೀಡಿದರು. ತಮ್ಮ ಪ್ರಸಿದ್ಧವಾದ ಕವನಗಳನ್ನು ಪ್ರಸ್ತುತ ಪಡಿಸಿದರು.

(ಪುಟ 11ಕ್ಕೆ)



ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರಾದ ದೊರೆಸ್ವಾಮಿಯವರು ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಸೋಸಿಯೇಶನ್‌ನ ಕಾರ್ಯದರ್ಶಿ ಎಂ. ಎ.ಎನ್. ಪ್ರಸಾದ್ ಇದ್ದಾರೆ.

# ಶ್ರೀಮತಿ ಮೀರಾ ಕುಲಕರ್ಣಿ

✍ ಭವಾನಿ

ಶ್ರೀಮತಿ ಮೀರಾ ಕುಲಕರ್ಣಿ ನಮ್ಮ ಅಸೋಸಿಯೇಶನ್ ಒಬ್ಬ ಆಜೀವ ಸದಸ್ಯೆಯಾಗಿದ್ದಾರೆ. ಅವರು ಕಳೆದ ತಿಂಗಳು ನಡೆದ ಚುನಾವಣೆಯಲ್ಲಿ ಅಖಿಲ ಭಾರತ ಮಹಿಳಾ ಪರಿಷತ್‌ನ ಮುಂಬೈ ಶಾಖೆಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು ನಮಗೆಲ್ಲಾ ಹೆಮ್ಮೆಯ ವಿಷಯ. ಕಳೆದ ತಿಂಗಳಷ್ಟೆ ಮಹಿಳಾದಿನವನ್ನೂ ಆಚರಿಸಿರುತ್ತೇವೆ. ಈ ಸಂದರ್ಭದಲ್ಲಿ ಅವರ ಪರಿಚಯವನ್ನು ಮಾಡಿಕೊಡುವ ಉದ್ದೇಶದಿಂದ ಇದೊಂದು ಚಿಕ್ಕ ಸಂದರ್ಶನವನ್ನು ಪ್ರಕಟಿಸುತ್ತಿದ್ದೇವೆ.

ನೇಸರು : ಅ.ಭಾ.ಮ.ಪ.ನ ಮುಂಬೈ ಶಾಖೆಯ ಅಧ್ಯಕ್ಷರಾಗಿ ಈ ಸಲದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದೀರಿ. ಅಭಿನಂದನೆಗಳು.

ಮೀರಾ : ಧನ್ಯವಾದಗಳು. ಏನು ನಿಮ್ಮ ಮೊದಲ ಪ್ರಶ್ನೆ?

ನೇ. : ಈ ಸಂಸ್ಥೆಗಾಗಿ ನೀವು ಯಾವಾಗಿನಿಂದ ಕೆಲಸ ಮಾಡುತ್ತಿದ್ದೀರಿ?

ಮೀ. : ಮೊದಲಿಗೆ ನಾನು ೧೯೭೫ರಲ್ಲಿ ಅ.ಭಾ.ಮ.ಪ.ನ ವರಳಿ ಶಾಖೆಯ ಪ್ರತಿನಿಧಿಯಾಗಿ ಇಲ್ಲಿ ಬಂದೆ. ಮುಂದೆ ಇಲ್ಲಿ ಒಬ್ಬ ಸಹ ಕಾರ್ಯದರ್ಶಿಯಾದೆ. ಅನಂತರ ಮುಂಬೈ ಶಾಖೆಯವರು ರಚಿಸಿದ ಪುನರ್ರಚನಾ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಆಮೇಲೆ ೧೬ ವರ್ಷ ಕೋಶಾಧಿಕಾರಿಯಾಗಿದ್ದೆ. ಅ.ಭಾ.ಮ.ಪ.ನ ಮುಂಬೈ ಶಾಖೆಯ ವಿದ್ಯಾ ಸಮಿತಿಯ ಆರಂಭದಿಂದಲೂ ಅದರ ಕೋಶಾಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ಅವರ ಬೀದಿ ಮಕ್ಕಳ ಪ್ರಕಲ್ಪದ ಸಮಿತಿಯಲ್ಲಿಯೂ ನಾನು ಮೊದಲಿನಿಂದಲೂ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಇದು ನನಗೆ ಬಹಳ ಅಪ್ಯವಾದ ಕೆಲಸವಾಗಿದೆ.

ನೇ. : ಈ ವಿದ್ಯಾ ಸಮಿತಿಯ ಬಗ್ಗೆ ಸ್ವಲ್ಪ ವಿವರಿಸುತ್ತೀರಾ?

ಮೀ. : ಮುಂಬೈ ಶಾಖೆಯ ಅನೇಕ ಪ್ರಕಲ್ಪಗಳಲ್ಲಿ ಇದೊಂದು. ಈ ಸಮಿತಿಯ ಮುಖಾಂತರ ನಾವು ಧಾರಾವಿಯ ಸ್ಲಂ ವಿಭಾಗದಲ್ಲಿ ಹಿಂದುಳಿದ ವರ್ಗದವರಿಗೆ ವಿದ್ಯಾಭ್ಯಾಸದಲ್ಲಿ ಸಹಾಯವಾಗಲೆಂದು ಟ್ಯೂಶನ್ ವರ್ಗ ನಡೆಸುತ್ತೇವೆ. ಅಲ್ಲದೆ ಮಹಿಳೆಯರಿಗಾಗಿ ವಯಸ್ಕರ ಶಿಕ್ಷಣ, ಕೈಗಾರಿಕೆಯ ವ್ಯವಸಾಯ, ಕೆಲಸಕ್ಕೆ ಹೋಗುವ ತಾಯಂದಿರಿಗೆ ಅನುಕೂಲವಾಗುವಂತೆ ಮಕ್ಕಳ ಬಾಲವಾಡಿ, ಆರೋಗ್ಯ ಶಿಬಿರಗಳು ಮುಂತಾದ ಕಾರ್ಯವನ್ನು ಹಮ್ಮಿಕೊಂಡಿದ್ದೇವೆ.

ನೇ. : ಅ.ಭಾ.ಮ.ಪ.ನ ಮುಂಬೈ ಶಾಖೆಯ ಇತರ ಪ್ರಕಲ್ಪಗಳಾವುವು?

ಮೀ. : ಒಂದು ಹಾಸ್ಟೆಲ್ ಸಮಿತಿ ಇದೆ. ಸಾಂತಾಕ್ರೂಜ್‌ನಲ್ಲಿ ನಾವೊಂದು ೧೨೫ ಮಹಿಳೆಯರಿಗಾಗಿ ಹಾಸ್ಟೆಲ್ ಕಟ್ಟಿಸಿದ್ದೇವೆ. ಇದು ಮುಂಬೈಗೆ ಕೆಲಸ ಹುಡುಕಿ ಬಂದ ಮಹಿಳೆಯರಿಗಾಗಿ ನಡೆಸುವ ಹಾಸ್ಟೆಲ್. ಇಲ್ಲಿನ ಮೇಲ್ವಿಚಾರಣೆಯನ್ನು ಹಾಸ್ಟೆಲ್ ಸಮಿತಿ ನೋಡಿಕೊಳ್ಳುತ್ತದೆ.

ಗ್ರಾಮೀಣ ಸಮಾಜ ಸುಧಾರಕ ಸಮಿತಿ (ರೂರಲ್ ಕಮ್ಯೂನಿಟಿ ಡೆವಲಪ್ಮೆಂಟ್ ಕಮಿಟಿ) ಇದೆ. ಇದರ ಮುಖಾಂತರ ನಾವು ತಾರಾಪುರದ ಆಚೆಗೆ ಇರುವ



ತಲಾಸರಿ ಎಂಬಲ್ಲಿ ಆದಿವಾಸಿ ಸಮಾಜದವರೊಡನೆ ಕೆಲಸ ಮಾಡುತ್ತೇವೆ. ಇಲ್ಲಿಗೊಂದು ಸಂಚಾರಿ ವೈದ್ಯಕೀಯ ವಾಹನ (ಮೊಬೈಲ್ ಹೆಲ್ತ್ ವ್ಯಾನ್) ಪ್ರತಿವಾರ ಭೇಟಿ ಕೊಡುತ್ತದೆ. ನಮ್ಮ ಕಾರ್ಯಕರ್ತರು ಅವರೊಡನೆ ಇಲ್ಲಿನ ನಿವಾಸಿಗಳ ಆರೋಗ್ಯದ ಕಡೆಗೆ ಗಮನ ಕೊಟ್ಟು ಅವರ ಬೇಕುಬೇಡಗಳನ್ನು ಗಮನಿಸುತ್ತಾರೆ. ಅಲ್ಲದೆ ಇಲ್ಲಿಯೂ ಸಹ ನಾವು ಮಹಿಳೆಯರಿಗಾಗಿ ಹೊಲಿಗೆಯ ವಿಭಾಗವನ್ನು ನಡೆಸುತ್ತೇವೆ. ಇದರಿಂದ ಜಮೀನು ವ್ಯವಸಾಯವಿರದ ದಿನಗಳಲ್ಲಿ ಅವರಿಗೆ ಜೀವನೋಪಾಯಕ್ಕೆ ಒಂದು ಮಾರ್ಗ ಸಿಗುತ್ತದೆ. ಅಲ್ಲದೆ ಮಕ್ಕಳ ವಿದ್ಯಾಭ್ಯಾಸದ ಕಡೆಗೂ ನಾವು ಗಮನ ಕೊಡುತ್ತೇವೆ.

ಬೀದಿ ಮಕ್ಕಳ ಪ್ರಕಲ್ಪದಲ್ಲಿ ನಾವು ಸುಮಾರು ೫೦ ಬೀದಿ ಮಕ್ಕಳಿಗಾಗಿ ದಾದರ್ ಸ್ಟೇಶನ್ ಹತ್ತಿರದ ಮುನಿಸಿಪಲ್ ಶಾಲೆಯಲ್ಲಿ ವರ್ಗ ನಡೆಸುತ್ತೇವೆ. ಬೆಳಿಗ್ಗೆ ೧೧ರಿಂದ ಸಂಜೆ ೬ರ ವರೆಗೆ ಮಕ್ಕಳು ಇಲ್ಲಿ ಮುಖ್ಯವಾಗಿ ಸ್ವಚ್ಛತೆ, ಮತ್ತು ಸಮಾಜದಲ್ಲಿ ಪಾಲಿಸಬೇಕಾದ ಸಂಸ್ಕೃತಿಯ ರೀತಿನೀತಿಗಳ ಬಗ್ಗೆ ಕಲಿಯುತ್ತಾರೆ. ಜೊತೆಗೆ ಅವರವರ ಆಸಕ್ತಿಗೆ ತಕ್ಕಂತೆ ಕುಶಲ ಕಲೆಗಳನ್ನೂ, ವಿದ್ಯಾಭ್ಯಾಸವನ್ನೂ ಕಲಿಯುತ್ತಾರೆ. ಇದೇ ವರ್ಷ ನಮ್ಮ ಹುಡುಗನೊಬ್ಬ ಎಚ್. ಎಸ್. ಸಿ. ಪರೀಕ್ಷೆ ಕಟ್ಟುತ್ತಾನೆ. ಕೆಲವು ಹುಡುಗರಿಗೆ ಕಂಪ್ಯೂಟರ್‌ನಲ್ಲಿ ಶಿಕ್ಷಣ ಕೊಟ್ಟಿರುತ್ತೇವೆ. ಒಂದೆರಡು ಹುಡುಗರು ಮೋಟರ್ ಮೆಕ್ಯಾನಿಕ್‌ನ ಕೆಲಸ ಕಲಿತು ಈಗ ಕೆಲಸ ಮಾಡುತ್ತಿದ್ದಾರೆ. ಹೀಗೆ ಇವು ನಾಲ್ಕು ಪ್ರಮುಖ ಪ್ರಕಲ್ಪಗಳು. ಅವಕ್ಕೆ ಒಂದೊಂದಕ್ಕೂ ಬೇರೆ ಬೇರೆ ಸಮಿತಿ ಇದ್ದು, ಪ್ರತಿಯೊಂದು ಸಮಿತಿಗೆ ಒಬ್ಬ ಅಧ್ಯಕ್ಷೆ (ಚೇರ್‌ಮನ್), ಒಬ್ಬ ಕಾರ್ಯದರ್ಶಿ, ಒಬ್ಬ ಕೋಶಾಧಿಕಾರಿಗಳಿದ್ದಾರೆ. ಪ್ರತಿಯೊಂದು ಸಮಿತಿಗೂ ಎರಡು ವರ್ಷಕ್ಕೊಮ್ಮೆ ಚುನಾವಣೆಗಳಾಗುತ್ತವೆ.

ನೇ. : ಚುನಾವಣೆಗಳನ್ನು ಯಾವ ರೀತಿ ನಡೆಸುತ್ತೀರಿ?

ಮೀ. : ವರಳಿ ಶಾಖೆ ಪ್ರತಿನಿಧಿ ಅಂತ ಹೇಳಿದೆನಲ್ಲ, ಹೀಗೆ ಮುಂಬೈ ಶಾಖೆಗೆ ಅಫಿಲಿಯೆಟಾಗಿ ಇಡೀ ಮುಂಬೈಯಲ್ಲಿ ಹರಡಿರುವ ೨೪ ಉಪಶಾಖೆಗಳಿವೆ. ಅವನ್ನು ೫ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಿಭಾಗದವರೂ ಅವರವರ ಶಾಖೆಯ ಪ್ರತಿನಿಧಿಗಳನ್ನು ಆರಿಸಿ ಕಳಿಸುತ್ತಾರೆ. ಹೀಗೆ ಇಡಿಯ ಮುಂಬೈನ ಪ್ರತಿನಿಧಿತ್ವವಾಗುತ್ತದೆ. ಮುಂಬೈನ ಕಾಸ್ಮೋಪಾಲಿಟನ್ ಸಂಸ್ಕೃತಿಯ ಪ್ರತಿನಿಧಿತ್ವವೂ ಆಗುತ್ತದೆ. ನಮ್ಮಲ್ಲಿ ಎಲ್ಲ ಭಾಷೆಯ, ಎಲ್ಲ ಧರ್ಮದ, ಎಲ್ಲ ವರ್ಗದ ಮಹಿಳೆಯರೂ ಇದ್ದಾರೆ.

ನೇ. : ನೀವು ವರಳಿ ಶಾಖೆಯ ಪ್ರತಿನಿಧಿತ್ವವನ್ನು ಮಾಡುವಂತಾದುದು ಹೇಗೆ? ಇಲ್ಲಿ ಎಷ್ಟು ವರ್ಷದಿಂದ ಇದ್ದೀರಿ?

ಮೀ. : ನಾನು ೧೯೭೭ರಲ್ಲಿ ಇಲ್ಲಿನ ಆರಂಭೋತ್ಸವದಿಂದಲೇ ಇಲ್ಲಿಗೆ ಬರುತ್ತಿದ್ದೇನೆ. ಮೊದಲಿಗೆ ಇಲ್ಲಿ ಕಾರ್ಯದರ್ಶಿಯಾದೆ. ನಂತರ ಹಣಕಾಸಿನ ವ್ಯವಹಾರವನ್ನು ಕಲಿತು ಕೋಶಾಧಿಕಾರಿಯಾದೆ. ಮುಂದೆ ಇಲ್ಲಿನ ಅಧ್ಯಕ್ಷಳಾಗಿ ಈಗಲೂ ಕೆಲಸ ಮಾಡುತ್ತಿದ್ದೇನೆ. ಹೀಗೆ ಪ್ರತಿಯೊಂದು ಉಪಶಾಖೆಯ ಪದಾಧಿಕಾರಿಗಳನ್ನು ಮುಂಬೈ ಶಾಖೆಯ ಸಮಿತಿಯ ಸದಸ್ಯರನ್ನಾಗಿ ಮಾಡುತ್ತೇವೆ. ವರ್ಷಗಳು ಕಳೆದ ಹಾಗೆ ಪ್ರತಿನಿಧಿಗಳು ಬದಲಾಗುತ್ತಾ ಹೋಗುತ್ತಾರೆ. ಮತ್ತು ಎರಡುವರ್ಷಕ್ಕೊಮ್ಮೆ ಅವರಲ್ಲಿಯೇ ಚುನಾವಣೆ ನಡೆದು ಅಧ್ಯಕ್ಷರು ಕೋಶಾಧಿಕಾರಿಗಳು, ಕಾರ್ಯದರ್ಶಿಗಳನ್ನು ಆರಿಸುತ್ತಾರೆ.

ನೇ. : ನೀವು ಇಷ್ಟೆಲ್ಲಾ ಸಮಾಜಿಕ ಕಾರ್ಯದಲ್ಲಿ ತೊಡಗಿಕೊಳ್ಳಲು ನಿಮಿತ್ತವೇನು? ಇದರಲ್ಲಿ ನಿಮ್ಮ ಮನೆಯವರ ಸಹಭಾಗವೆಷ್ಟು?

ಮೀ. : ಮನೆಯವರ ಸಹಕಾರವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ನಾನು ಈ ಕ್ಷೇತ್ರದಲ್ಲಿ ಹೆಜ್ಜೆ ಇಡಲು ಸಹ ಅವರೇ ನಿಮಿತ್ತವಾಗಿದ್ದು. ನಾನು ಮದುವೆಯಾಗಿ ಧಾರವಾಡದಿಂದ ಮುಂಬೈಗೆ ಬಂದಿದ್ದು ೧೯೫೮ರಲ್ಲಿ. ಆಗ ನನಗೆ ಮುಂಬೈನ ಪರಿಚಯವಿರಲಿಲ್ಲ. ನಮ್ಮ ಮನೆಯವರ ಜೊತೆಯಿಲ್ಲದೆ ಎಲ್ಲಿಯೂ ಹೋಗುವ ಧೈರ್ಯವಾಗುತ್ತಿರಲಿಲ್ಲ. ಒಮ್ಮೆ ಅವರ ಗೆಳೆಯರೊಬ್ಬರು ಬಂದು ನಮ್ಮಿಬ್ಬರನ್ನು ಒಂದು ಹೊಸ ಜಾಗಕ್ಕೆ ಕರೆದುಕೊಂಡು (ಪುಟ ೯ಕ್ಕೆ)

# ಹರಿಹರನ ರಗಳೆಗಳು : ಸ್ತ್ರೀವಾದಿ ಓದಿನಲ್ಲಿ

- ಡಾ. ಎಚ್.ಎಸ್. ಶ್ರೀಮತಿ

ನಮ್ಮ ಬದುಕಿನ ಎಲ್ಲ ವಲಯಗಳನ್ನೂ ಸ್ತ್ರೀವಾದಿ ದೃಷ್ಟಿಕೋನದಿಂದ ಪುನರವಲೋಕಿಸುವ ಅಗತ್ಯವಿದೆಯಾದರೂ ನಮ್ಮ ವ್ಯವಸ್ಥೆ ಅದಕ್ಕೆ ಎಷ್ಟರಮಟ್ಟಿಗೆ ಸಿದ್ಧವಾಗಿದೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಏಕೆಂದರೆ, ಈವರೆಗೂ ನಮ್ಮ ಯಾವುದೇ ಜ್ಞಾನವಲಯವೂ 'ಲೋಕಗ್ರಹಿಕೆ' ಅಥವಾ 'ಬದುಕಿನ ಚಿಂತನೆ' ಎಂದರೆ ಪುರುಷ ಲೋಕದ ಗ್ರಹಿಕೆ ಮತ್ತು ಪುರುಷ ಬದುಕಿನ ಚಿಂತನೆ ಎಂಬ ಕೇಂದ್ರವನ್ನು ಬಿಟ್ಟುಕೊಟ್ಟಿರುವ ನಿದರ್ಶನಗಳು ಕಾಣುತ್ತಿಲ್ಲ. ನಿಜವಲ್ಲಿ ಇಂಥಾ ತಾತ್ವಿಕ ಚಿಂತನೆಗಳು ದೇಶ, ಕಾಲ, ವರ್ಗ, ವರ್ಣ, ಜಾತಿ, ಕೋಮು, ಲಿಂಗ ತಾರತಮ್ಯಗಳನ್ನೆಲ್ಲಾ ಮೀರಿ ಇವೆಲ್ಲಕ್ಕೂ ಅತೀತವಾಗಿ ನಿಂತು ಒಟ್ಟು ಬದುಕಿನ ಸಾಮರಸ್ಯವನ್ನು ಸಾಧಿಸುವ ಆಧಾರಗಳೆನಿಸಬೇಕು. ಅದಕ್ಕೆ ಪೋಷಕವೆನಿಸುವ ಮೌಲ್ಯಗಳನ್ನು ಸಮಾಜದಲ್ಲಿ ನೆಲೆಗೊಳಿಸುವ ಸಾಧನಗಳೆನಿಸಬೇಕು. ಆದರೆ ವಾಸ್ತವದಲ್ಲಿ ಇವು ಬಹುಮಟ್ಟಿಗೆ ಸಮಾಜದ ಪ್ರಬಲ ಸಮುದಾಯಗಳು ಒಪ್ಪಬಹುದಾದ ಮೌಲ್ಯಗಳನ್ನೇ ಎತ್ತಿ ಹಿಡಿಯುತ್ತವೆ. ಅಲ್ಲದೆ, ಈ ಮೌಲ್ಯಗಳನ್ನು ಸಾರ್ವತ್ರಿಕಗೊಳಿಸುವ ಮೂಲಕ ದುರ್ಬಲ ಸಮುದಾಯಗಳು ಇವನ್ನೇ ಮರುಮಾತಿಲ್ಲದೇ ಒಪ್ಪಿಕೊಳ್ಳುವಂತೆ ಕೂಡ ಒತ್ತಾಯಿಸುತ್ತವೆ. ದೊಡ್ಡ ಪ್ರಜಾಪ್ರಭುತ್ವವಾದಿ ಧೋರಣೆಯೇ ಎಂಬಂತೆ ಇದನ್ನೇ 'ಲೋಕದೃಷ್ಟಿ' ಎಂದೂ ಕರೆಯಲಾಗುತ್ತದೆ. ತನ್ನ ಅಸ್ತಿತ್ವದ ಹುಡುಕಾಟದಲ್ಲಿರುವ ಯಾವುದೇ ಸಮುದಾಯ ಈ 'ಲೋಕದೃಷ್ಟಿ'ಯನ್ನು ಮೊದಲಿಗೆ ಪ್ರಶ್ನಿಸ ಬೇಕಾಗುತ್ತದೆ.

ಸಮಾಜದಲ್ಲಿ ಹಲವು ನೆಲೆಯ ತಾರತಮ್ಯಗಳಿವೆಯಾದರೂ ಲಿಂಗತಾರತಮ್ಯವು ಈ ಎಲ್ಲ ನೆಲೆಗಳಲ್ಲೂ ಕಾಣಬರುವ ಒಂದು ರೂಢಿ. ಏಕೆಂದರೆ, ಒಟ್ಟು ವ್ಯವಸ್ಥೆಯೇ ಪುರುಷ ನಿಯಂತ್ರಣದಲ್ಲಿದ್ದು ಬದುಕಿನ ಎಲ್ಲ ನೆಲೆಗಳಲ್ಲೂ ಆಯಾ ಪುರುಷರ ಯಜಮಾನಿಕೆಯಲ್ಲಿ ಅಲ್ಲಿನ ಮಹಿಳೆಯರ ಬದುಕು ಸಿಲುಕಿರುತ್ತದೆ. ಹಾಗಾಗಿ, ನಮ್ಮ ತಾತ್ವಿಕ ಚಿಂತನೆಗಳು, ನಮ್ಮ ಎಲ್ಲ ಜ್ಞಾನವಲಯಗಳು 'ಲೋಕದೃಷ್ಟಿ'ಯ ಪ್ರಸ್ತಾಪ ಮಾಡುವಾಗ ಅದಕ್ಕೆ 'ಪುರುಷದೃಷ್ಟಿ' ಎಂಬ ಅಘೋಷಿತ ಚೌಕಟ್ಟು ಮಾತ್ರವೇ ಇರುತ್ತದೆ. ಮೇಲುನೋಟಕ್ಕೆ ಪ್ರಜಾಪ್ರಭುತ್ವವಾದಿ ಎಂಬಂತೆಯೂ, ಸಕಲ ಸರ್ವರಿಗೂ ಅನ್ವಯವಾಗುವ ಸಾರ್ವತ್ರಿಕ ಗುಣದ್ದಾಗಿಯೂ ಕಾಣುವ 'ಮಾನವತಾವಾದ'ದ ತಾತ್ವಿಕತೆಯನ್ನೇ ಒಂದಿಷ್ಟು ಸೂಕ್ಷ್ಮಗಳಲ್ಲಿ ನೋಡಿದರೆ ನಮ್ಮ ಬೌದ್ಧಿಕ ಚಿಂತನೆ, ಚರ್ಚೆಗಳು ಅದೆಷ್ಟು ಸಲೀಸಾಗಿ ಭ್ರಮೆಗಳನ್ನು ಸೃಷ್ಟಿಸಬಲ್ಲವು ಎಂಬ ಅರಿವಾಗುತ್ತದೆ. ಮಾನವತಾವಾದವು ಸೃಷ್ಟಿಸುವ ಹುಸಿನೆಲೆಗಳನ್ನು ಶೋಧಿಸಲು ತೊಡಗಿದರೆ ಅವು ಪ್ರತಿಪಾದಿಸುತ್ತಿರುವುದೂ ಅಸಮಾನತೆಯ ನೆಲೆಗಳನ್ನೇ ಎಂಬುದು ಅರ್ಥವಾಗುತ್ತದೆ. ಬಿಳಿಯರು 'ಹ್ಯೂಮನಿಸಂ' ಎಂದರೆ ಅದು ಕಪ್ಪುಜನಾಂಗವನ್ನು ಒಳಗೊಳ್ಳುವುದಿಲ್ಲ, ಮೇಲು ಜಾತಿ, ವರ್ಗದವರ ಮಾನವತಾವಾದದಲ್ಲಿ ಕೆಳಜಾತಿ ವರ್ಗಗಳಿರುವುದಿಲ್ಲ. ಹಾಗೆಯೇ ಪುರುಷ ಚಿಂತನೆಯ ಮಾನವತಾವಾದದಲ್ಲಿ ಪುರುಷನು ಮಾತ್ರವೇ ಇರುವುದು. ಅಲ್ಲಿ ಮಹಿಳೆಯ ಬದುಕು ಪರಿಗಣಿತವಾಗುವುದೇ ಇಲ್ಲ.

ಸಾಹಿತ್ಯ ಚರ್ಚೆಯೊಂದಕ್ಕೆ ಪರಿಪ್ರೇಕ್ಷ್ಯವಾಗಿ ಇಷ್ಟು ದೀರ್ಘವಾದ ತತ್ತ್ವಶಾಸ್ತ್ರದ ಚಿಂತನೆಯನ್ನು ಮಂಡಿಸುವ ಅಗತ್ಯ ವಿಚಿತ್ರವಾಗಿ ಕಾಣಿಸಬಹುದು. ಆದರೆ ಸಾಹಿತ್ಯ ವಲಯದಲ್ಲಿ ಕೂಡ ಈ ಪುರುಷ ರಾಜಕಾರಣವೆ ಪ್ರಬಲವಾಗಿರುವಾಗ, ಈ ಹಿನ್ನೆಲೆಯಿಲ್ಲದೆ 'ಸ್ತ್ರೀವಾದಿ' ಓದು ಎಂಬುದನ್ನು ವಿವರಿಸುವುದು ಕಷ್ಟ. ಇಪ್ಪತ್ತನೆಯ ಶತಮಾನದ ಚಿಂತನೆ ಸಮುದಾಯದ ಪ್ರಬಲರು ತಮಗೆ ಇಷ್ಟ ಬಂದಂತೆ ಕಟ್ಟಿಕೊಂಡು ಜಾರಿಗೊಳಿಸಿದ್ದ ತಾತ್ವಿಕ ಚಿಂತನೆಗಳನ್ನು ಪ್ರಶ್ನಿಸತೊಡಗಿದೆ. ಮಾನವತಾವಾದ ಎಂಬಂತಹ ಭ್ರಮೆಗಳನ್ನು ಒಡೆಯುತ್ತಾ, ಮರುಪ್ರಶ್ನೆಗಳನ್ನೂ, ತಿರುಗೇಟು ಸವಾಲುಗಳನ್ನೂ ಒಡ್ಡುತ್ತಿದೆ. ದುರ್ಬಲ ಸಮುದಾಯಗಳು ತಮ್ಮ ಅಸ್ತಿತ್ವದ ನೆಲೆಗಳನ್ನು ಶೋಧಿಸುವಷ್ಟಾದರೂ ಶಕ್ತಿಯನ್ನು ಕೂಡಿಸಿಕೊಳ್ಳುತ್ತಿವೆ. ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಇಂಥಾ ಒಂದು ಶಕ್ತಿಯ ಎಳೆಯಾಗಿ ಸ್ತ್ರೀವಾದವು ಹುಟ್ಟಿಕೊಂಡಿದೆ. ವಿವಿಧ ಜ್ಞಾನವಲಯಗಳ ಚಿಂತನೆಗಳನ್ನು ಮರುಪರಿಶೀಲನೆಗೆ, ಹೊಸ ಪ್ರಶ್ನೆ ಸವಾಲುಗಳಿಗೆ ಒಡ್ಡುತ್ತಿರುವ ಸ್ತ್ರೀವಾದಿ ಚಿಂತನೆಯು ಸಾಹಿತ್ಯ ವಲಯವನ್ನು ಈ ಹೊಸ ಆಯಾಮದಿಂದ ಪರಿವೀಕ್ಷಿಸುತ್ತಿದೆ. ಈವರೆಗೂ ಸಾಹಿತ್ಯದ ಓದು ಎಂಬುದು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿ ಅನ್ವಯವಾಗುವ ಸಂಗತಿ ಎನಿಸಿತ್ತು. 'ಪುರುಷವಾದಿ' ಓದು ಎಂಬ ಮಾತು ಅಂದೂ ಇಲ್ಲ, ಇಂದೂ ಇಲ್ಲ. ಏಕೆಂದರೆ, ಈ ಓದು ಎಂಬುದು ಪುರುಷವಾದಿ ಓದು ಮಾತ್ರವೇ ಆಗಿತ್ತು. ಒಂದು ಕೃತಿಯ ಓದು ಮಹಿಳೆಯ ಪಾಲಿಗೆ ಭಿನ್ನವಾಗಿರಬಹುದು ಎಂಬ ಕಲ್ಪನೆ ಸ್ವತಃ ಮಹಿಳೆಯರಿಗೂ ಇರಲಿಲ್ಲವೇನೋ. ಏಕೆಂದರೆ, ಈವರೆಗೆ ನಾವು ಸಾಹಿತ್ಯವನ್ನು ರಸಾನುಭವ, ಧರ್ಮ ಇತ್ಯಾದಿ ಕಾರಣಗಳಿಗೆ 'ವಾಚಿ'ಸುತ್ತಿದ್ದೆವು. ಸಮಾಜದಲ್ಲಿ ಸ್ಥಿರಗೊಂಡಿರುವ ಪುರುಷ ಪ್ರಧಾನ ಮೌಲ್ಯಗಳನ್ನೇ ಸಾರ್ವತ್ರಿಕಗೊಳಿಸಿ ಸಾಹಿತ್ಯದಲ್ಲೂ ಉಣಿಸಲಾಗುತ್ತಿದೆ ಎಂಬ ತೊಡಕನ್ನು ಯಾವ ಮಹಿಳೆಯೂ ಎತ್ತಲಿಲ್ಲ. ಏಕೆಂದರೆ ಸಮಾಜದ ವ್ಯವಸ್ಥೆಯಲ್ಲಿ ಅವಳ ಬದುಕು ಕೂಡ ಪುರುಷ ಪ್ರಧಾನ ಮೌಲ್ಯಗಳೇ ತನ್ನವು ಎಂದು ಸ್ವೀಕರಿಸಬೇಕಾದ ಅನಿವಾರ್ಯತೆಯಲ್ಲಿಯೇ ಇದೆ. ಆದರೆ, ಸಾಮಾಜಿಕ ಪರಿಸರಗಳಲ್ಲಿ, ಚಿಂತನೆಗಳಲ್ಲಿ ಆಗುತ್ತಿರುವ ಮುಖ್ಯ ಪಲ್ಲಟಗಳಿಂದಾಗಿ ಇಂದು ಪ್ರತಿಯೊಂದು ಸಮುದಾಯಕ್ಕೂ ಅಸ್ತಿತ್ವದ ಶೋಧನೆಯ ಯತ್ನ ಅನಿವಾರ್ಯವಾಗಿದೆ. ಮಹಿಳೆಯ ಬದುಕು ಕೂಡ ಇಂಥ ಒಂದು ಶೋಧದಲ್ಲಿ ತೊಡಗಿದೆ. ಈಗ ಸಾಹಿತ್ಯದ ಓದು ಮುಂಚಿನಂತೆ ರಸಾನುಭವ, ಧರ್ಮ ಎಂಬ ರೀತಿಯಲ್ಲಿ, ಅಥವಾ ಕಲೆಗಾಗಿ ಕಲೆ. ಓದಿಗಾಗಿ ಓದು ಎಂಬ ನೆಲೆಯಲ್ಲಿ ಉಳಿಯುವುದು ಸಾಧ್ಯವಾಗುತ್ತಿಲ್ಲ. ಓದು ಅರ್ಥೈಸುವಿಕೆಯ ಆಯಾಮವನ್ನು ಅನಿವಾರ್ಯವಾಗಿ ಒಳಗೊಳ್ಳುತ್ತಿದೆ.

ಆದರೆ, ಸಮಕಾಲೀನ ಕೃತಿಯೊಂದನ್ನು ಓದುವಾಗ ಈ ಅರ್ಥೈಸುವಿಕೆ ಆಯಾಮವನ್ನು ಅಳವಡಿಸಿಕೊಂಡಷ್ಟೇ ಸುಸಂಗತವಾಗಿ, ಅನ್ಯಕಾಲದ ಕೃತಿಯೊಂದನ್ನು ಅಳವಡಿಸಿಕೊಳ್ಳಲು ಸಾಧ್ಯವೇ ಎಂಬುದು ದೊಡ್ಡ ಪ್ರಶ್ನೆಯೇ ಆಗುತ್ತದೆ. ಅನ್ಯಕಾಲದ ಯಾವುದೇ ಕೃತಿಯನ್ನು ನಮ್ಮ ಇಂದಿನ 'ಸ್ತ್ರೀವಾದಿ' ಕಣ್ಣಿನಿಂದ ನೋಡುವುದು ಎಂಬ ಪ್ರಶ್ನೆಯೇ ವಿಚಿತ್ರವಾದದ್ದು. ಏಕೆಂದರೆ, ಈ ಯಾವುದೇ ಕೃತಿಯನ್ನು 'ಅರ್ಥೈಸಲು' ಹೊರಟಾಗಲೂ ಪುರುಷಪ್ರಧಾನ ಮೌಲ್ಯಗಳನ್ನು ಸಾರ್ವತ್ರಿಕಗೊಳಿಸಲಾಗಿದೆ ಎಂಬ ಅಂಶವೇ ಕಾಣುವುದು. ನಮ್ಮ ಸ್ತ್ರೀವಾದಿಗಳು ಪ್ರಾಚೀನ ಸಾಹಿತ್ಯದ ಸ್ತ್ರೀಪಾತ್ರಗಳನ್ನೆಲ್ಲ ಹೆಕ್ಕಿ ತಮಗೆ ಬೇಕಾದ 'ಮಾದರಿ'ಗಳಾಗಿ ಕಡೆದು ನಿಲ್ಲಿಸುವ ಯತ್ನಗಳನ್ನು ಮಾಡಿದ್ದಾರೆ. ಇವುಗಳನ್ನು ನಮ್ಮ ಆಶಯಗಳಿಗೆ ಆಕಾರ ಕೊಟ್ಟು ಸಂತೋಷ ಪಡುವ ಯತ್ನಗಳೆಂದು ಭಾವಿಸಬಹುದೇ ಹೊರತು, ನಮ್ಮ ಆಶಯಗಳು ಆ ಕಾಲದ ಚಿಂತನೆಗಳಲ್ಲಿ, ಸೃಜನಶೀಲ ಅಭಿವ್ಯಕ್ತಿಗಳಲ್ಲಿ ಮಾನ್ಯತೆ ಪಡೆದಿದ್ದವು ಎಂದು ಕಲ್ಪಿಸುವುದು ಕಷ್ಟ. ಏಕೆಂದರೆ ಸಮಾಜದಲ್ಲಿ ಇಲ್ಲದ ರೂಢಿ ಅಥವಾ ಚಿಂತನೆಗಳು ಯಾವುದೇ ಅಭಿವ್ಯಕ್ತಿಯಲ್ಲಾದರೂ ಸ್ಥಳವನ್ನು ಪಡೆಯಲಾರದು. ಹಾಗಾದರೆ ಅಲ್ಲಿ ಸ್ತ್ರೀಪರ ಚಿಂತನೆ ಅಥವಾ ಆಕೆಯ ಬಗೆಗೆ ಪ್ರೀತಿ, ಅಭಿಮಾನ ಗೌರವಗಳು ವ್ಯಕ್ತವಾಗಿಲ್ಲವೇ ಎಂದರೆ ಖಂಡಿತವಾಗಿಯೂ ವ್ಯಕ್ತವಾಗಿದೆ. ಆಗಿನ ಸಮಾಜದಲ್ಲಾಗಲೀ, ಈಗಿನ ರೂಢಿಯಲ್ಲಾಗಲೀ ಪುರುಷ ಚಿಂತನೆಯ ಈ ವ್ಯವಸ್ಥೆಯ ಕಲ್ಪನೆಯಲ್ಲಿ ಹೆಣ್ಣಿನ ಹಕ್ಕು, ಬಾಧ್ಯತೆ, ಸ್ಥಾನಮಾನಗಳನ್ನು ನಿರ್ದೇಶಿಸುವ ಹಲವಾರು ಅಂಶಗಳಿವೆ. ಈ ನಿರ್ದೇಶನಗಳಿಗೆ ಬದ್ಧವಾಗುವ ಯಾವುದೇ ಹೆಣ್ಣಿಗೂ ಈ ಸಮಾಜ ಗೌರವ, ಮರ್ಯಾದೆಗಳನ್ನು ಸಲ್ಲಿಸಿದಂತೆ ವರ್ತಿಸುತ್ತದೆ. ಆದರೆ, ವಾಸ್ತವದಲ್ಲಿ ಇದು ಅಂಥಾ ಹೆಣ್ಣಿಗೆ ಯಜಮಾನಿಕೆಯ ಭಾವದಲ್ಲಿ ನೀಡಿದ ಒಂದು

ಸರ್ಟಿಫಿಕೇಟ್ ಮಾತ್ರವೇ ಆಗಿರುತ್ತದೆ. ನಾವು ಇಷ್ಟನ್ನೇ ಸ್ತ್ರೀಪರ, ಸ್ತ್ರೀವಾದಿ ಎಂದೆಲ್ಲಾ ಗ್ರಹಿಸುತ್ತೇವೆ ಎಂದಾದರೆ. ಪುರುಷ ಪ್ರಧಾನ ಮೌಲ್ಯಗಳು ಸಾರ್ವತ್ರಿಕಗೊಳ್ಳುತ್ತವೆ ಎಂಬ ಅಂಶವನ್ನು ಮರೆತು ಭ್ರಮೆಯಲ್ಲಿ ಉಳಿಯುತ್ತೇವಷ್ಟೆ.

ಈ ಹಿನ್ನೆಲೆಯಲ್ಲಿಯೇ, ಹರಿಹರನ ರಗಳೆಗಳನ್ನು ಒಬ್ಬ ಸ್ತ್ರೀವಾದಿಯಾಗಿ ಓದುವುದು ಸಾಧ್ಯವೇ ಎಂಬ ಪ್ರಶ್ನೆಗಿಂತ ನನ್ನನ್ನು ಹೆಚ್ಚಾಗಿ ಕಾಡಿದ್ದು ಇದು ಸಾಧುವೆ ಎಂಬ ಪ್ರಶ್ನೆ. ಏಕೆಂದರೆ, ಹರಿಹರ ಮುಖ್ಯವಾಗಿ ಭಕ್ತಕವಿ. ತನ್ನ ಭಕ್ತಿಯ ಅಭಿವ್ಯಕ್ತಿಗೆ, ಭಕ್ತ - ಭಕ್ತೆಯರ ಜೀವನ ಚರಿತ್ರೆಗಳು ಕೇವಲ ಮಾಧ್ಯಮಗಳಷ್ಟೇ ಭಕ್ತ - ಭಕ್ತೆ ಎಂಬ ಲಿಂಗ ತಾರತಮ್ಯ ಅವನಿಗೆ ಅಗತ್ಯವಿಲ್ಲ. ಹೀಗಿರುವಾಗ, ಈ ಅರ್ಥವನ್ನು ಹಚ್ಚಿ ಅವನ ಕೃತಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಓದಲು ಹೊರಡುವುದು ಅಭಾಸವೆನಿಸುತ್ತದೆ. ಹರಿಹರನ ರಗಳೆಗಳಲ್ಲಿ ಮಹಿಳೆಯರ ಜೀವನ ಚರಿತ್ರೆಗಳನ್ನೇ ಕೇಂದ್ರವಾಗಿರಿಸಿಕೊಂಡವು ಎಂಬ ಅರ್ಥದಲ್ಲಿ ಒಂದು ಪಟ್ಟಿಯನ್ನು ಮಾಡಬಹುದು. ಕೋಳೂರ ಕೊಡಗೂಸು, ನಿಂಬಿಯಕ್ಕ, ಅಮ್ಮವ್ವೆ, ವೈಜಕವ್ವೆ, ಹೊರೂರ ಹೆಣ್ಣು, ಮಹಾದೇವಿಯಕ್ಕ, ಮಲುಹಣೆ, ಕಾರಿಕಾಲಮ್ಮೆ, ಯಸ್ಯ ಜ್ಞಾನದೇವಿ ಮೊದಲಾದ ಹಲವಾರು ಶರಣೆಯರು ಹರಿಹರನ ಮುಖ್ಯ ಕಥಾವಸ್ತುಗಳೇ ಆಗಿದ್ದಾರೆ. ಆದರೆ ಈ ಯಾವ ಮಹಿಳೆಯರ ಜೀವನ ಚಿತ್ರಣವನ್ನೂ ಮಹಿಳೆಯ ಬದುಕಿನ ವೈಶಿಷ್ಟ್ಯಗಳೆಂದು ನೋಡುವುದು ಸಾಧ್ಯವಾಗುವುದಿಲ್ಲ. ಆಕೆ ಇತರ ಭಕ್ತರಂತೆಯೇ ಅದೇ ಸಮಾನ ನೆಲೆಯಲ್ಲಿ ನಿಲ್ಲುವ ಒಬ್ಬ ಭಕ್ತೆ ಅಷ್ಟೆ.

ಭಕ್ತಿ ಎಂಬುದು ಅತ್ಯಂತ ವೈಯಕ್ತಿಕ ಗುಣದ್ದು. ಇದರ ಅಭಿವ್ಯಕ್ತಿಯೂ ವೈಯಕ್ತಿಕ ನೆಲೆಯದಾದಾಗ ಸಮಸ್ಯೆ ಇಲ್ಲ. ಆದರೆ, ನುಡಿ, ಮಾತು, ಸಾಹಿತ್ಯಗಳಂತಹ ಮಾಧ್ಯಮದಲ್ಲಿ ಭಕ್ತಿ ಅಭಿವ್ಯಕ್ತಿಗೊಂಡಾಗ ಅದು ಸಾರ್ವಜನಿಕವೆನಿಸಿ ವಿಚಿತ್ರದ ಸವಾಲುಗಳನ್ನು ಎದುರಿಸುತ್ತದೆ. ಆ ಪಾತ್ರಗಳಲ್ಲಿ ಕಾಣಿಸಿಕೊಂಡ ಭಕ್ತ-ಭಕ್ತೆಯರು ಈ ಸವಾಲುಗಳನ್ನು ಎದುರಿಸಬೇಕಾದ ಹೊಣೆಗಾರರಾಗಿ ಬಿಡುತ್ತಾರೆ. ಉದಾಹರಣೆಗೆ, ಮಹಾದೇವಿಯಕ್ಕನ ಜೀವನ ಚರಿತ್ರೆಯನ್ನು ಬರೆಯುತ್ತಿರುವ ಕವಿ, ಕೌಶಿಕನೊಂದಿಗೆ ಇನ್ನು ಬದುಕನ್ನು ನಡೆಸಲಾರೆ ಎಂಬ ಮನಸ್ಥಿತಿಯಲ್ಲಿ ಅಕ್ಕ ಗಂಡನ ಮನೆಯನ್ನು ತೊರೆದು ಹೊರಟ ಪ್ರಸಂಗವನ್ನು ಹೇಗೆ ಚಿತ್ರಿಸುತ್ತಾನೆ ಎಂಬುದು, ಆ ಸಂದರ್ಭದಲ್ಲಿ ಒಬ್ಬ ಹೆಣ್ಣಿನ ವರ್ತನೆ ಹೇಗಿರಬಹುದು ಎಂಬ ಅವನ ಕಲ್ಪನೆಯನ್ನು ಆಧರಿಸಿರುತ್ತದೆ. ಆದರೆ, ಈ ಕಲ್ಪನೆ ಅವನಲ್ಲೇ ಹುಟ್ಟಿ ಬೆಳೆದು ಆಕಾರ ತಳೆದಿರುವುದಿಲ್ಲವೆಂಬುದು ಗಮನಾರ್ಹ. ತನ್ನ ಸಮಕಾಲೀನ ಸಾಮಾಜಿಕ ಚಿಂತನೆಯಲ್ಲಿ, ಇಲ್ಲಿ ಬದುಕಿನಲ್ಲಿ ರೂಢಿಯಲ್ಲಿರುವಂತೆ ಒಬ್ಬ ಹೆಣ್ಣಿಗೆ ಒಪ್ಪಿತವಾದ ವರ್ತನೆಯನ್ನಷ್ಟೇ ಅವನು ಚಿತ್ರಿಸಿರುತ್ತಾನೆ. ಅಕ್ಕ ಉಟ್ಟ ಸೀರೆಯನ್ನು ಕಿತ್ತೊಗೆದು ಬೆತ್ತಲೆ ಹೊರಟುಬಿಟ್ಟಳೆಂಬ ಕಲ್ಪನೆ ತೀರಾ ಪ್ರಚಲಿತಲಾದದ್ದು. ಒಬ್ಬ ಹೆಣ್ಣಾಗಿ ನಾನಂತೂ ಇದನ್ನು ಅಕ್ಷರಶಃ ಸತ್ಯ ಎಂದು ಒಪ್ಪಲು ಸಾಧ್ಯವೇ ಇಲ್ಲ. ಈ ಕುರಿತು ಬಂದ ಸಾಹಿತ್ಯದಲ್ಲಿ ಮಾತ್ರ ಇದೊಂದು ಅಧಿಕೃತ ಮಾಹಿತಿಯೇ ಎಂಬಂತೆ ದಾಖಲಾಗಿದೆ. ನಮ್ಮ ಸಮಕಾಲೀನ ಸಾಹಿತ್ಯ ಸಿನಿಮಾಗಳಲ್ಲೂ ಇದು ಕಣ್ಣಿಗೆ ಕಟ್ಟುವ ಚಿತ್ರವಾಗಿ, ಅಕ್ಕ ಹಾಗೆ ಬೆತ್ತಲಾಗಿ ಬೀದಿಯಲ್ಲಿ ನಡೆದುಹೋದದ್ದೇ ನಿಜ ಎನಿಸುವಂತೆ ಮಾಡುತ್ತದೆ. ಒಂದು ವೇಳೆ ಒಂದು ಹೆಣ್ಣು ಹೀಗೆ ವರ್ತಿಸಿದಳೆಂದೇ ಭಾವಿಸೋಣ. ಇಂಥಾ ಅವಳ ವರ್ತನೆಗೆ ಸಮಾಜದ ಪ್ರತಿಕ್ರಿಯೆ ಏನು ಎಂಬುದಂತೂ ಇನ್ನಷ್ಟು ವಿಚಿತ್ರವಾಗಿ ನಮ್ಮ ಸಾಹಿತ್ಯದಲ್ಲಿ ದಾಖಲಾಗಿದೆ. ಬೆತ್ತಲಾದ ಅಕ್ಕ ತನ್ನ ಸಮೃದ್ಧ ಕೂದಲಿನಿಂದ ತನ್ನ ಶೀಲವನ್ನು ಮುಚ್ಚಿಕೊಂಡು ನಡೆದಳಂತೆ. ಆಕೆಗೆ ಹಾಗೆ ಸಮೃದ್ಧ ಕೂದಲು ಇದ್ದಿರಲಿಲ್ಲವೆಂದರೆ ಇನ್ನೇನು ಕಲ್ಪನೆಯಲ್ಲಿ ಆಕೆಯ 'ಶೀಲ'ವನ್ನು ಕಾಯಲಾಗುತ್ತಿತ್ತೋ ಎಂಬ ಕುಚೇಷ್ಟೆಯ ತರ್ಕ ತೋರುತ್ತದೆ. ಅಕ್ಕ ಬೆತ್ತಲಾಗಿ ನಡೆದ ಪ್ರಕರಣ ಸಂವೇದನಾಶೀಲ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಆಕೆಯ ವ್ಯಕ್ತಿತ್ವವನ್ನು 'ಧ್ವನಿಸುವ' ಕೆಲಸ ಮಾಡಬೇಕಾಗಿತ್ತು. ಅದು ಹಾಗೆ ಆಗಲಿಲ್ಲ. ಬದಲಿಗೆ, ಆಕೆ ಬೆತ್ತಲಾಗಿ ನಡೆದದ್ದೇ ವಾಸ್ತವ ಸಂಗತಿ ಎನಿಸಿಬಿಟ್ಟಿತು. ಆದರೆ, ಒಬ್ಬ ಮಹಿಳೆಯು ಇಷ್ಟೊಂದು ತೀವ್ರವಾಗಿ ಸಮಾಜಕ್ಕೆ ತನ್ನ ಪ್ರತಿರೋಧವನ್ನು ಸಲ್ಲಿಸಿರಬಹುದು ಎಂಬ ಆಘಾತವನ್ನು ತಡೆದುಕೊಳ್ಳುವುದು ಕೂಡ ಆ ಸಮಾಜಕ್ಕೆ ಕಷ್ಟವಾಯಿತು. ಆಕೆಯ ಮಾನರಕ್ಷಣೆಗಾಗಿ ಸಮೃದ್ಧ ಕೂದಲನ್ನು ಕಲ್ಪಿಸಲಾಯಿತು. ಇತ್ತೀಚೆಗೆ ಸಿರಿಗೆರೆ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಅಕ್ಕನ ಜೀವನ ಚಿತ್ರಣ ಮಾಡುವ ಸಾಹಿತ್ಯ ಅಸಹಜ ಕಲ್ಪನೆಗಳ ಕಣಜವಾಗಿದೆ ಎಂದು ಹೇಳಿ, ಮುಖ್ಯ ಉದಾಹರಣೆಯಾಗಿ ಅಕ್ಕಮಹಾದೇವಿ ರಗಳೆ ಹಾಗೂ ಶೂನ್ಯ ಸಂಪಾದನೆ ಕೃತಿಗಳಿಂದ ಆಯ್ದ ಪ್ರಸಂಗಗಳನ್ನು ವ್ಯಾಖ್ಯಾನಿಸಿದರು. ಹರಿಹರನ ರಗಳೆಯ ಆರನೇ ಸ್ಥಳದ ಕೊನೆಯಲ್ಲಿ ಒಂದು ಸನ್ನಿವೇಶ ಬರುತ್ತದೆ. ಕೌಶಿಕ ಮತ್ತು ಅಕ್ಕಮಹಾದೇವಿಯರು ಮಲಗುವ ಕೋಣೆಗೆ ಅಕ್ಕನ ಗುರುಗಳು ಶಿಷ್ಯ ಸಮುದಾಯದೊಂದಿಗೆ ನೇರವಾಗಿ ಪ್ರವೇಶಿಸುತ್ತಾರೆ. ಗುರುಭಕ್ತಿಯಲ್ಲಿ ಮೈಮರೆತ ಅಕ್ಕ ಬೆತ್ತಲೆಯಾಗಿಯೇ ಗುರುಗಳಿಗೆ ನಮಿಸುತ್ತಾಳೆ ಎಂಬುದು ಪ್ರಸಂಗ. ಸ್ವಾಮೀಜಿಗಳಿಗೆ ಬಂದ ಪ್ರಶ್ನೆಗಳೆಂದರೆ ಅರಮನೆಯ ಶಯ್ಯಾಗೃಹಕ್ಕೆ ಗುರುಗಳು ದಿಢೀರನೆ ಪ್ರವೇಶಿಸಲು ಹೇಗೆ ಸಾಧ್ಯ. ಅಲ್ಲಿ ಕಾವಲು ಇರಲಿಲ್ಲವೇ, ಗುರುಗಳಿಗೆ ಉಚಿತಾನುಚಿತ ವಿವೇಕವಿರಲಿಲ್ಲವೇ, ಅಕ್ಕನ ಭಕ್ತಿಯನ್ನು ಸಾದರ ಪಡಿಸಲು ಇಂಥಾ ಕಲ್ಪನೆಯೇ ಬೇಕಿತ್ತೇ ಎಂಬ ರೀತಿಯವು. ಶೂನ್ಯ ಸಂಪಾದನೆಯ ಇನ್ನೊಂದು ಪ್ರಸಂಗವನ್ನು ಉದಾಹರಿಸಿದ್ದಾರೆ. ಹಲಗೆಯಾರ್ಯನ ಶೂನ್ಯ ಸಂಪಾದನೆಯಲ್ಲಿ ಕೌಶಿಕನಿಂದ ಬಿಡಿಸಿಕೊಂಡು ಅಕ್ಕ ಉಡುತಡಿಯಿಂದ ಹೊರಟು ಕಲ್ಯಾಣಕ್ಕೆ ಬರುವ ಸಂದರ್ಭದ ಚಿತ್ರಣ. ಅಕ್ಕನ ಸೌಂದರ್ಯವನ್ನು ನೋಡಿ ಕಿನ್ನರಿ ಬೊಮ್ಮಯ್ಯ ಅಕ್ಕನೊಂದಿಗೆ ಶೃಂಗಾರ ಸಲ್ಲಾಪ ಆರಂಭಿಸುತ್ತಾನೆ. ಅಕ್ಕ ಆತನೊಂದಿಗೆ ಸಹೋದರ ಭಾವದಲ್ಲಿಯೇ ವ್ಯವಹರಿಸಿದರೂ ಕಿನ್ನರಿ ಬೊಮ್ಮಯ್ಯ ಆಕೆಯ ಕೈ ಹಿಡಿಯಲು ಮುಂದಾಗುತ್ತಾನೆ. ಆಕೆಯಲ್ಲಿ ದೇಹಾಭಿಮಾನವಿದೆಯೇ ಎನ್ನುವುದನ್ನು ಪರೀಕ್ಷಿಸಲು ಆತ ಆಕೆಯ ಅಂಗಾಂಗಗಳನ್ನು ಮುಟ್ಟಿ ಮುಟ್ಟಿ ನೋಡುತ್ತಾನೆ ಎಂಬುದು ವಿವರ. ಸ್ವಾಮೀಜಿ ಅಕ್ಕನನ್ನು ಚಿತ್ರಿಸಲು ಇಂಥಾ ಅಸಹಜ ಕಲ್ಪನೆಯ ಅಗತ್ಯವಿದೆಯೇ ಎಂದು ಪ್ರಶ್ನಿಸಿದರು. ಸ್ವಾಮೀಜಿಯವರ ಈ ಇಡೀ ವ್ಯಾಖ್ಯಾನ ಪತ್ರಿಕೆಯೊಂದರಲ್ಲಿ ವರದಿಯಾದದ್ದು, ಡಾ. ಶಿವಮೂರ್ತಿ ಸ್ವಾಮೀಜಿಯವರು ಸಂಪ್ರದಾಯವಾದದ ಹಟವಾದಿಗಳಲ್ಲ. ನಮ್ಮ ಪ್ರಸ್ತುತಕ್ಕೆ ಅನ್ವಯವಾಗುವಂತೆ ಪ್ರಾಚೀನ ಚಿಂತನೆಗಳನ್ನು ಸಮನ್ವಯಗೊಳಿಸಬಲ್ಲ ವಿಶಿಷ್ಟ ಪರಂಪರೆಯವರು ಎಂಬುದು ಅವರ ನಡೆ ನುಡಿ, ಭಾಷಣಗಳಲ್ಲಿ ನಿರಂತರವಾಗಿ ವ್ಯಕ್ತವಾಗುತ್ತಿದೆ ಎಂಬುದು ನಿಜ. ಆದರೂ, ಎಂಥಾ ಉನ್ನತ ಉದ್ದೇಶದ, ಮುಕ್ತ ಹೃದಯದ ಚಿಂತನೆಗಳು ಕೂಡ ಎಷ್ಟೋ ಸಲ ಶತಮಾನಗಳ ರೂಢಿಯ ಪುರುಷ ಚಿಂತನೆಯಿಂದ ಮುಕ್ತವಾಗುವುದು ಕಷ್ಟ ಎಂಬುದನ್ನು ಹೇಳಲಷ್ಟೇ ಅವರ ಈ ವ್ಯಾಖ್ಯಾನವನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಮಹಾದೇವಿಯ ಮಾನವನ್ನು ಸಂರಕ್ಷಿಸಲು ಸಮೃದ್ಧ ಕೂದಲಿನ ಕಲ್ಪನೆ ಮೂಡಿದ್ದಕ್ಕೂ, ಇಲ್ಲಿನ ವ್ಯಾಖ್ಯಾನಕ್ಕೂ ಮೂಲಭೂತ ವ್ಯತ್ಯಾಸವೇನಿಲ್ಲ. ಇಲ್ಲಿಯೂ ಅಕ್ಕನ ಮಾನರಕ್ಷಣೆಯೇ ಮುಖ್ಯ ಅವಧಾನವಾಗಿದೆ. ಅಸಹಜ ಕಲ್ಪನೆಗಳಿಂದಾಗಿ ಆಕೆಯ ಮಾನಕ್ಕೆ ಒದಗಿದ ನಷ್ಟದ ಬಗ್ಗೆ ಸಿಟ್ಟು ಇದೆ. ಇವೆಲ್ಲದರ ಹಿಂದೆ ಹೆಣ್ಣಿನ ದೇಹ, ಅವಳ ಶೀಲಮಾನಗಳನ್ನು ಕುರಿತಂತೆ ಈ ಸಮಾಜವು ಚಾಲಿಯಲ್ಲಿಟ್ಟಿರುವ ನಿರ್ದೇಶಕಗಳ ಬಗೆಗೆ ಗೌರವಯುತ ಒಪ್ಪಿಗೆ ಹೊಂದಿರುವ ಮನಸ್ಸು ಚಿಂತನೆ ನಡೆಸಿದೆ ಎಂಬುದು ಮುಖ್ಯವಾದ ಮಾತು.

ಈ ಪ್ರಸಂಗಗಳನ್ನು ಒಬ್ಬ ಮಹಿಳೆ ಹೇಗೆ ಗ್ರಹಿಸಬಹುದು ಎಂಬ ಕುತೂಹಲ ನನ್ನದು. ಪುರುಷ ಚಿಂತನೆಗೆ ಒಗ್ಗಿಕೊಂಡು ಬಿಟ್ಟ ಬುದ್ಧಿಜೀವಿ ಮಹಿಳೆಗೆ ಪುರುಷ ತರ್ಕದಲ್ಲಿ ಲೋಪ ಕಾಣದಿರುವುದೂ ಸಾಧ್ಯ. ಆದರೆ, ಒಬ್ಬ ಸ್ತ್ರೀವಾದಿಯಾಗಿ ಇಡೀ ಈ ಅಕ್ಕನ ಬೆತ್ತಲೆ ಪ್ರಕರಣ ಹಾಗೂ ಅದರ ಸುತ್ತಲಿನ ಕಲ್ಪನೆ, ವ್ಯಾಖ್ಯಾನಗಳನ್ನು ಭಿನ್ನವಾಗಿ ಗ್ರಹಿಸುವ ಅಗತ್ಯವಿದೆ ಎನಿಸುತ್ತದೆ. ಎಷ್ಟೋ ಶಿವಭಕ್ತರು ಬೆತ್ತಲೆ ನಡೆದ

ಅಕ್ಕನಿಗಿಂತಲೂ ಉನ್ಮತ್ತರಾಗಿ ವರ್ಣಿಸಿದ ಕತೆಗಳಿವೆ. ತಮ್ಮ ಪ್ರೀತಿಯ ಕರುಳಿನ ಕುಡಿಯನ್ನು ಕತ್ತರಿಸಿ ಹೋಳುಗಳನ್ನಾಗಿ ಮಾಡಿ, ಹದವಾಗಿ ಬೇಯಿಸಿ ಅಪ್ಪ ಶರಣರ ಎಲೆಯಲ್ಲಿ ಬಡಿಸಿದವರು, ಹೆಂಡತಿಯನ್ನು ಶರಣರ ಭೋಗಕ್ಕೆ ಒದಗಿಸಿದವರು ಇದ್ದಾರೆಂದ ಮೇಲೆ, ಬೆತ್ತಲಾಗುವುದು ಅಥವಾ ಇನ್ನಿತರ ಅಂಥಾ ಹುಚ್ಚಿಗೆ ಸಮೀಪದ ವರ್ಣನೆಗಳನ್ನು ತೋರುವ ಭಕ್ತರ ರೀತಿ ತೀರಾ ಸಾಮಾನ್ಯವೇ. ಆದರೆ, ಪುರುಷ ಭಕ್ತರ ಈ ಯಾವ ವರ್ಣನೆಗಳನ್ನೂ ಅನುಚಿತ ಎಂದೂ, ಅಸಹಜ ಎಂದೂ ಯಾರೂ ಹೇಳಿಲ್ಲ. ಅದನ್ನು ಭಕ್ತಿಯ ಉನ್ಮಾದ ಎಂದು ಕೂಡ ಹೇಳಿಲ್ಲ. ಬದಲಿಗೆ, ಭಕ್ತಿಯ ಪರಾಕಾಷ್ಠೆ ಈ ಲೋಕದ ಹಂಗನ್ನು ತೊರೆದ ಪರಿಪೂರ್ಣ ತಾತ್ವಿಕ ಮನಸ್ಥಿತಿ ಎಂದೇ ಕೊಂಡಾಡಲಾಗಿದೆ. ಆದರೆ, ಅಕ್ಕ ಬೆತ್ತಲಾದದ್ದು ಮಾತ್ರ ಈ ಧ್ವನಿಸಂಕೇತವನ್ನು ಪಡೆದುಕೊಳ್ಳುವುದಿಲ್ಲ. ಬೆತ್ತಲಾಗಿರುವುದೇ ನಿಜವಾದರೆ, ಕೇಶರಾಶಿಯಿಂದ ಶೀಲವನ್ನು ಮುಚ್ಚಿಕೊಳ್ಳುವ ಉದ್ದೇಶವೇನು ಎಂಬ ಪ್ರಶ್ನೆಗೆ ಜ್ಞಾನಿಗಳು ತುಂಬಿದ ಸಭೆಯೊಳಗೆ ಆಕೆ ಉತ್ತರಿಸಬೇಕಾಗುತ್ತದೆ. ಆಕೆಯೇನೋ 'ಹೀಗೆ ಮಾಡಿದ್ದು ನನ್ನ ಸ್ವಂತದ ರಕ್ಷಣೆಗಾಗಿ ಅಲ್ಲ, ಎದುರಿನ ಪುರುಷ ಎದೆಗುಂದಬಾರದೆಂದು ಮಾಡಬೇಕಾಯಿತು' ಎಂಬ ದಿಟ್ಟ ಉತ್ತರವನ್ನೇನೋ ಕೊಟ್ಟಳು. ಈ ಉತ್ತರವನ್ನು ಆಕೆಯ 'ಪ್ರತಿಭಟನೆ' ಎಂದು ಗುರುತಿಸುವ ಗೋಜಿಗೂ ಆ ಪುರುಷ ಸಮುದಾಯ ಹೋಗಲಿಲ್ಲ. ಹಾಗೆ ಗುರುತಿಸಿದರೆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಇದು ಅಸಂಭವವೇ ಆಗಿರುವಾಗ ಅವಳ ವರ್ತನೆಗೆ, ಪ್ರತಿಕ್ರಿಯೆಗೆ ತನಗೆ ಅನುಕೂಲವಾಗುವಂತೆ ಅರ್ಥ ಹಚ್ಚುವುದು ಸುಲಭದ ಉಪಾಯವಾಗಬಹುದು. ತನಗೆ ಕುರುಡು ಗಂಡನನ್ನು ಕಟ್ಟುತ್ತಿದ್ದಾರೆಂದು ತಿಳಿದ ಕ್ಷಣದಲ್ಲಿ ಗಾಂಧಾರಿಗೆ ಈ ಬಲೆಯಿಂದ ತಪ್ಪಿಸಿಕೊಳ್ಳಬಹುದೆಂಬ ಯಾವ ವಾಸ್ತವ ಮಾರ್ಗವೂ ಉಳಿದಿರಲಿಲ್ಲ. ಪ್ರತಿಭಟನೆಯಾಗಿ ತನ್ನ ಕಣ್ಣನ್ನೇ ಕಪ್ಪುಬಟ್ಟೆಯಿಂದ ಕಟ್ಟಿಕೊಂಡಳು. ದ್ರೌಪದಿ ತನಗೆ ಒಪ್ಪಿಗೆಯಿಲ್ಲದ ವಿವಾಹದ ನಿಯಮಗಳಲ್ಲಿ ಸಿಲುಕಿಬಿಗ್ಗಿಕನ್ನೆಯೇ ಆದರೂ ಪಾರಾಗುವ ದಾರಿಯೇನೂ ಉಳಿದಿರಲಿಲ್ಲ. ತನ್ನ ಬದುಕಿನುದ್ದಕ್ಕೂ ಪ್ರತಿಭಟನೆಯನ್ನು ವ್ಯಕ್ತ ಮಾಡಿದಳು. ಆದರೆ, ಹೆಣ್ಣಿನ ಪ್ರತಿಭಟನೆಯನ್ನು ಗುರುತಿಸುವುದೆಂದರೆ ಸಾಮಾಜಿಕವಾಗಿ ಅದಕ್ಕೊಂದು ಚಲಾವಣೆಯೇ ದೊರೆತು ಬಿಡುವ ಅಪಾಯ. ಈ ಪ್ರತಿಭಟನೆಯನ್ನು ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಣಗಿಸಲಾಗದಾದರೂ, ಮಹಿಳಾ ಸಮುದಾಯಕ್ಕೆ ಅದು ಮಾದರಿಯಾಗಿ ಒದಗಿಬಿಡುವ ಅಪಾಯವನ್ನಾದರೂ ತಡೆಯಲೇಬೇಕು. ಈಗ ಗಾಂಧಾರಿ, ದ್ರೌಪದಿಯರ ಪ್ರತಿರೋಧದ ಅಭಿವ್ಯಕ್ತಿಯನ್ನು ಪಾತಿವ್ರತ್ಯ, ತ್ಯಾಗ, ಸಹನೆಗಳೆಂದು ಅರ್ಥೈಸಲಾಗುತ್ತದೆ. ಅಕ್ಕನ ಪ್ರತಿಭಟನೆಯನ್ನು ಭಕ್ತಿ, ಅನುಭಾವಗಳ ದಿಕ್ಕಿನಲ್ಲಿ ಹೊರಳಿಸಲಾಗುತ್ತದೆ. ಈ ಮಾತನ್ನು ಹೇಳುವಾಗ ಅಕ್ಕನ ಭಕ್ತಿ ಅನುಭವಗಳ ಸಾಧನೆಗಳನ್ನು ಕುರಿತು ಹಗುರವಾದ ಪರಿಗಣನೆ ಖಂಡಿತವಾಗಿಯೂ ಇಲ್ಲ. ಅಂದಿನ ತನ್ನ ಸಾಮಾಜಿಕ ಸಂದರ್ಭದಲ್ಲಿ, ಒಲ್ಲದ ಗಂಡನೊಂದಿಗೆ ಸಂಸಾರವನ್ನು ನಡೆಸಬೇಕಾಗಿ ಬಂದ ಒತ್ತಾಯಕ್ಕೆ, ಆ ಗಂಡನನ್ನು ತ್ಯಜಿಸಿ ಒಂಟಿಯಾಗಿಯೇ ಸಾಗುವೆನೆಂಬ ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿಯೇ ಆಗಲಿ, ಒಡ್ಡಿದಳು. ಈ ಪ್ರತಿಭಟನೆಯನ್ನು ನಗಣ್ಯವಾಗಿ ಕಂಡ ಸಮಾಜದ ನಡುವೆಯೇ ಉಳಿದು, ಅದು ಹಾಕಿದ ವಿವಾಹ ಎಂಬ ನಿಯಮವನ್ನು ಮುರಿದು ಆ ವಿವಾಹಕ್ಕೆ ತನ್ನದೇ ವ್ಯಾಖ್ಯಾನವನ್ನು ಕಲ್ಪಿಸಿ ಬದುಕಿದಳು. ಒಲ್ಲದ ಗಂಡನನ್ನು ತ್ಯಜಿಸುವುದೇ ದೊಡ್ಡ ಸಾಹಸವೆನಿಸುವಾಗ, ಆಯ್ಕೆಯ ಗಂಡನನ್ನು ಹುಡುಕುವ ಮಾತು ನಿರರ್ಥಕವೇ ಸರಿ. ಆ ಹುಡುಕಾಟಕ್ಕೆ ವಾಸ್ತವದ ಬೇರುಗಳು ಇಲ್ಲ. ಏನೆಲ್ಲ ಸಾಹಸ ಮಾಡಿದರೂ ಹೆಂಗಸು ತನ್ನ ಆತ್ಯಂತಿಕ ಬಿಡುಗಡೆಯನ್ನು ಕಲ್ಪಿಸುವುದು ಇಂದಿಗೂ ಕಷ್ಟದ ಸಂಗತಿಯೇ. ದಿಟ್ಟ ಹೆಂಗಸು ಕೊನೆಯ ಪಕ್ಷ ತನ್ನ ಜಂಜಡದ ಬದುಕಿನಿಂದಲಾದರೂ ಬಿಡುಗಡೆಯನ್ನು ಪಡೆಯುವ ಸಾಹಸ ಮಾಡಿಯಾಳು. ಸಾಧಾರಣವಾಗಿ ಹೆಣ್ಣುಮಕ್ಕಳು ಲೋಕದ ತಾರತಮ್ಯಗಳನ್ನೂ, ಹೆಣ್ಣಿನ ಸ್ಥಿತಿಗತಿಗಳ ವೈರುಧ್ಯಗಳನ್ನೂ ತಿಳಿದು ಅನುಭವಿಸಿ, ಅದಕ್ಕೊಂದು ಹೊರ ಮಾರ್ಗವೆಂಬಂತೆ ಕನಸಿನ ಲೋಕವನ್ನು ಕಟ್ಟಿಕೊಳ್ಳುತ್ತಾರೆ. ಸಾಧಾರಣ ಹೆಣ್ಣುಮಕ್ಕಳು ಹೀಗೆ ಹಗಲುಗನಸುಗಳನ್ನು ಕಾಣುವಾಗ ಅದಕ್ಕೆ ರಂಜಕತೆ ಇರುತ್ತದೆ, ಯಾವುದೇ ಆಳವಿಲ್ಲದೆ ಹರಿಯುತ್ತಲೇ ಸಾಗುವ ವ್ಯಾಪಕತೆ ಇರುತ್ತದೆ. ಇವಕ್ಕೆ ವಾಸ್ತವದ ಬೇರುಗಳೇ ಇಲ್ಲವಾದ್ದರಿಂದ, ಇವು ಎಂದಿದ್ದರೂ ಕುಸಿದುಬೀಳುವ ಮರಳ ಗೂಡುಗಳಷ್ಟೆ. ಈ ಕಟು ವಾಸ್ತವದ ಎದುರಲ್ಲೇ ನಿಂತು ಕೂಡ, ತನ್ನ ಆತ್ಮ ಗೌರವವನ್ನು ಕಾಯ್ದುಕೊಳ್ಳುವ ನಿಲುವನ್ನು ತಳೆಯುವುದು ಅಪರೂಪದ ಅಕ್ಕಮಹಾದೇವಿಯರಂತಹ ಗಟ್ಟಿ ಹೆಣ್ಣುಗಳಿಗಷ್ಟೇ ಸಾಧ್ಯವಾಗುತ್ತದೆ. ಈ ಹೆಣ್ಣುಗಳು ಕಾಣುವ ಕನಸುಗಳು ಪ್ರತಿಭಟನೆಯ ಒಂದು ವಿಧಾನವೇ ಆಗಬಹುದು. ಸಾಮಾಜಿಕ ನ್ಯಾಯ ಎಂಬುದು ಹೆಣ್ಣಿಗೆ ದಕ್ಕಲಾರದ ಸಂಗತಿಯಾಗಿಬಿಟ್ಟಾಗ, ಆತ್ಮದಂಡನೆಯ ಮಾರ್ಗವೇ ಪ್ರತಿರೋಧದ ಅಭಿವ್ಯಕ್ತಿಯಾಗಬೇಕಾಗುತ್ತದೆ. ಸಮಾಜವೇನೂ ಈ ಪ್ರತಿರೋಧಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತದೆಂದಿಲ್ಲ. ಅದನ್ನು ನಿರ್ಲಕ್ಷಿಸಲು, ಪಕ್ಕಕ್ಕೆ ಸರಿಸಲು, ಅಣಗಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತದೆ. ಅಕ್ಕನಂತಹ ಗಟ್ಟಿ ವ್ಯಕ್ತಿತ್ವದ ಹೆಣ್ಣನ್ನು ಹೀಗೆ ಹಗುರವಾಗಿ ಕಾಣಲು ಸಾಧ್ಯವಾಗುವುದಿಲ್ಲ. ಸಮಾನ ನೆಲೆಯಲ್ಲಿ ಕಾಣುವುದು ಅನಿವಾರ್ಯವೇ ಆಗಿಬಿಡುತ್ತದೆ. ಆದರೂ ಸಮಯ ಸಿಕ್ಕಾಗಲೆಲ್ಲ ಧೃತಿಗೆಡಿಸುವ ಪ್ರಯತ್ನವನ್ನಾದರೂ ಮಾಡುತ್ತಲೇ ಇರುತ್ತದೆ. ಅಕ್ಕನ ಆತ್ಮ ಬಲವಿದ್ದರೆ ಮಾತ್ರ ಹೆಣ್ಣು ಕಟ್ಟಕಡೆಯವರೆಗೂ ತನ್ನ ಪ್ರತಿಭಟನೆಯನ್ನು ಸಂಗಾತವಾಗಿಸಿಕೊಳ್ಳುತ್ತದೆ.

ಇಂಥ ಬಿಗುವಾದ ಸಮಾಜ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ನಮ್ಮೆಲ್ಲಾ ಜ್ಞಾನವಲಯಗಳೂ ಕೆಲಸ ಮಾಡುತ್ತಿರುತ್ತವೆ. ಹರಿಹರನಂತಹ ಭಕ್ತನಿಗೆ ಈ ಚೌಕಟ್ಟಿನ ಹಂಗೇನೋ ಇಲ್ಲ. ಆದರೆ ಆತನಿಗೆ ಭಕ್ತಿಯಲೋಕದಿಂದ ಆಚೆಗೆ ಪ್ರಪಂಚ ಎಂಬುದಕ್ಕೆ ಅರ್ಥವೂ ಇಲ್ಲ. ಹಾಗಾಗಿ, ಯಾವುದೆ ಒಂದು ಸಮುದಾಯದ ಪರವಾಗಿ ಅವನ ಚಿಂತನೆ ಹರಿಯುವುದೂ ಇಲ್ಲ. ಆದರೂ, ಅವನು ಸಮಾಜ ಜೀವಿಯಾಗಿರುವ ಒಂದೇ ಕಾರಣದಿಂದ ರೂಢಿಗತ ಸಾಮಾಜಿಕ ಚಿಂತನೆಗಳು ಅವನಲ್ಲಿ ನೆಲೆ ಪಡೆದಿವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಒಬ್ಬ ಪುರುಷನಾಗಿ ಅವನೊಳಗೆ ಒಪ್ಪಿತ ರೂಢಿಗತ ಪುರುಷ ಚಿಂತನೆಗಳಿವೆ. ಭಕ್ತಿಯ ಹೊರತಾಗಿ ಇನ್ನೇನನ್ನೂ ವಿಶೇಷವಾಗಿ ಚಿಂತಿಸುವ ಆಕಾಂಕ್ಷೆಯೂ ಇಲ್ಲದ ಆತನ ಅಭಿವ್ಯಕ್ತಿಯಲ್ಲಿ ಹೆಚ್ಚಿನ ಯಾವುದೇ ಉದ್ವೇಗವಿಲ್ಲದೆ ಪ್ರಚಲಿತ ಸಾಮಾಜಿಕ ಚಿಂತನೆಗಳು ಪ್ರಸ್ತುತಗೊಂಡಿರುತ್ತವೆ ಅಷ್ಟೆ. ಹಾಗಾಗಿಯೇ, ಹರಿಹರನ ರಗಳೆಗಳಲ್ಲಿ ಮಾನವೀಯ ಲಕ್ಷಣ ಎಂದರೆ, ಗಂಡಸಿನ ದೃಷ್ಟಿಕೋನದ ಮಾನವೀಯತೆಯಷ್ಟೆ ಇದೆ ಎಂದು ಗುರುತಿಸಿದರೆ ಅದು ಹರಿಹರನ ಮೇಲೆ ಹೇರುವ ಆರೋಪವೆನಿಸಬೇಕಿಲ್ಲ. ಬದಲಿಗೆ, ಅದು ಆ ಕಾಲದ ಸಾಮಾಜಿಕ ಚಿಂತನೆಯ ಚಿತ್ರಣ ಎಂದಷ್ಟೇ ತಿಳಿಯಬೇಕು. ಉದಾಹರಣೆಗೆ, ನಮ್ಮ ಕೆಎಸ್‌ನ ಅವರು ಹೆಣ್ಣು-ಗಂಡು ಸಂಬಂಧಗಳನ್ನು ಅತ್ಯಂತ ನವಿರಾಗಿ, ಮಧುರವಾಗಿ, ಆತ್ಮೀಯವಾಗಿ ಚಿತ್ರಿಸಿದವರು. ಆದರೆ 'ತೌರ ಸುಖದೊಳಗೆನ್ನ ಮರೆತಿಹಳು ಎನ್ನದಿರಿ' ಎನ್ನುವಲ್ಲಿ ಅಥವಾ 'ಮದುವೆಯಾಗಿ ತಿಂಗಳಿಲ್ಲ ನೋಡಿರಣ್ಣ ಹೇಗಿದೆ ನಾನು ಕರೆದಾಗಲೆಲ್ಲ ಬರುವಳೆನ್ನ ಹಾರದೆ' ಎಂದಾಗ, ಇಚ್ಛೆಯನರಿತು ನಡೆವ ಸತಿಯ ಮಾದರಿಯೇ ಇದೆ. ಇದನ್ನು ಹಿಡಿದು ನಾವು ಕೆಎಸ್‌ನ ಸ್ತ್ರೀ ವಿರೋಧಿ ಎಂದು ಪ್ರತಿಪಾದಿಸಿದರೆ ಮೂರ್ಖತನವೆನಿಸೀತಷ್ಟೆ. ಇಲ್ಲಿನ ಅಭಿವ್ಯಕ್ತಿ, ನಮ್ಮಲ್ಲಿ ಪುರುಷ ದೃಷ್ಟಿಯೇ ಲೋಕದೃಷ್ಟಿಯಾಗಿರುವ ಸಂದರ್ಭದ ಒಂದು ಮಾದರಿ ಅಷ್ಟೆ.

ಹೀಗಾಗಿಯೇ, ಹರಿಹರನಲ್ಲಿ ವರ್ಗ, ವರ್ಣ, ಲಿಂಗ ಮೊದಲಾಗಿ ಲೋಕಸಂಬಂಧಿ ಚಿಂತನೆಗಳು ಬಂದಿವೆಯಾದರೂ ಅವನ್ನು 'ಹರಿಹರನ ದೃಷ್ಟಿಕೋನ' ಎಂದು ವಿಶೇಷವಾಗಿ ಗುರುತಿಸುವುದು ಕಷ್ಟ. ಹೆಚ್ಚೆಂದರೆ, ಈ ಕುರಿತು ವೀರಶೈವ ಚಳುವಳಿಗಳ ತಾತ್ವಿಕತೆಗೆ ಅವನ ಒಪ್ಪಿಗೆ ಇದೆ ಎಂದಷ್ಟೇ ಹೇಳಬಹುದು. ಅವನ ಪಾಲಿಗೆ ಈ ಚಿಂತನೆಗಳು ಅವನ ಆತ್ಯಂತಿಕ ಆಸಕ್ತಿಗಳೂ ಅಲ್ಲ, ತಾತ್ವಿಕ ಗುರಿಯೂ ಅಲ್ಲ. ಭಕ್ತಿ ಪರಾಕಾಷ್ಠೆಗೆ ಬಳಕೆಗೊಳ್ಳುವ ಸೋಪಾನಗಳಷ್ಟೇ. ಅದ್ದರಿಂದಲೇ,

ವರ್ಗ, ವರ್ಣ ಅಥವಾ ಲಿಂಗಸಂಬಂಧಿ ಚಿಂತನೆಗಳು ಹರಿಹರನಲ್ಲಿ ಈಗಾಗಲೆ ಒಪ್ಪಿತ ಮಾದರಿಯ ಲೋಕದೃಷ್ಟಿಗಷ್ಟೇ ಸೀಮಿತವಾಗಿರುತ್ತದೆ. ಸ್ತ್ರೀಯಾಗಲೀ, ಪುರುಷನಾಗಲೀ ಹರಿಹರನ ದೃಷ್ಟಿ ಅಲ್ಲಿ ಭಕ್ತಿಯ ಪರಾಕಾಷ್ಠೆಯ ಮಾದರಿಯನ್ನು ಶೋಧಿಸುವಲ್ಲಿ ಮಾತ್ರ ಆಸಕ್ತವಾಗಿದ್ದು, ಲಿಂಗ ತಾರತಮ್ಯದ ಪ್ರಶ್ನೆ ಎಂಬುದು ಕೇವಲ ಆರೋಪಿತವಾಗುತ್ತದೆ.

ಈ ಹಿನ್ನೆಲೆಯಲ್ಲಿಯೇ, ಹರಿಹರನ ರಗಳೆಗಳಲ್ಲಿ ಶರಣೆಯರ ಪ್ರಸ್ತಾಪಗಳೂ ಭಕ್ತಿಯ ಪರಾಕಾಷ್ಠೆಯ ಮಾದರಿಗಳಾಗಿ ಚಿತ್ರಣಗೊಂಡಿವೆಯಾದರೂ, ಆ ಮಹಿಳೆಯರಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ ಎಂಬುದನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ, ಸಾಮಾಜಿಕ ಜೀವನದಲ್ಲಿ ಮಹಿಳೆಯ ಇನ್ನಿತರ ಸಾಧನೆಗಳು ಏನೇ ಇರಬಹುದಾದರೂ ಮೊದಲಿಗೆ ಆಕೆ ಸದ್ಗೃಹಿಣಿ, ಆದರ್ಶ ಸತಿಯಾಗಿರಬೇಕು. ಇದೆ ಪ್ರಚಲಿತ ಲೋಕದೃಷ್ಟಿ. ಮದುವೆ ಎಂಬ ಸಾಮಾಜಿಕ ಸಂಸ್ಥೆಯ ನಿಯಮಗಳನ್ನು ಉತ್ತರಿಸಿದಲ್ಲದೆ ಯಾವ ಹೆಣ್ಣಿಗೂ ಗತ್ಯಂತರವೇ ಇಲ್ಲ. ಆಕೆ ಕರಿಕಾಲಮ್ಮೆ, ಪಾಂಡ್ಯ ಮಹಾದೇವಿ, ಯಸ್ವಜ್ಞಾನ ದೇವಿಯರಂತೆ ಭಕ್ತಿಯಲ್ಲೂ ಮದುವೆ ಎಂಬ ಸಂಸ್ಥೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಪತಿಯ ನೆರಳಾಗಿ ಮಾತ್ರವೇ ಉಳಿಯಬೇಕು. ಅವರು ಶಿವನ ಸಾನ್ನಿಧ್ಯವನ್ನು ಸೇರುವುದು ಕೂಡ ಇದೇ ಸ್ಥಿತಿಯಲ್ಲೇ. ಅಮ್ಮವ್ವೆಯಂತೆ ವಿಧವೆಯಾದರೆ ಅವಳ ತಾಯ್ತನದ ಹಂಬಲವೇ ಶಿವಭಕ್ತಿಯಾಗಬಹುದು. (ನಮ್ಮ ದಾಸಸಾಹಿತ್ಯದ ಹರಪನಹಳ್ಳಿ ಭೀಮವ್ವ, ಶೃಂಗಾರಮ್ಮ, ನಮ್ಮ ಕಾಲದ ತಿರುಮಲಾಂಬ ಕಲ್ಯಾಣಮ್ಮ... ಇಂಥ ಹಲವಾರು ಸಾಧಕಿಯರದು ಇದೇ ದಾರಿ.) ಮಲುಹಣನ ವ್ಯಾಮೋಹವನ್ನು ಬಿಡಿಸುವ ಮಲುಹಣೆ ಗುರುವಾಗುತ್ತಾಳೆ. 'ಹೆಂಗೂಸಿಲ್ಲದೆ ನನಗೆ ರಾತ್ರಿ ಕಳೆಯದು' ಎಂದ ಶರಣನಿಗೆ ಯಾರೂ ಸಿಗದಿದ್ದರೆ ತನ್ನನ್ನೇ ಅದಕ್ಕೆ ಬಳಸುತ್ತಾನೆ ಎಂಬ ಸಂಗತಿ ಅರಿವಿದ್ದ ಬಸವದೇವನ ಹೆಂಡತಿ ಮಾಯಿದೇವಿ ಆ ಕರೆಯ ನಿರೀಕ್ಷೆಯಲ್ಲಿ ಸಿದ್ಧವಾಗಿ ನಿಂತಿರುತ್ತಾಳೆ. ಮದುವೆಯ ಬಂಧದಲ್ಲಿ ಭಕ್ತೆಯು ಈ ಪರಿಯ ಭಕ್ತಿಯನ್ನು ಮೆರೆಯುತ್ತಾಳಾದರೆ, ಆ ಮದುವೆಯ ಬಂಧವನ್ನು ನಿರಾಕರಿಸಿದಾಗಲೂ ಆಕೆಗೆ ಪುರುಷ ಲೋಕದೃಷ್ಟಿಯ ಆಚೆಗೆ ದಾಟುವುದೇನೂ ಸಾಧ್ಯವಾಗುವುದಿಲ್ಲ. ಮಹಾದೇವಿ, ಹೇರೂರ ಹೆಂಗಸು ಮತ್ತು ವೈಜಕವ್ವೆಯರು ಗಂಡನನ್ನು ನಿರಾಕರಿಸಿದ್ದು ಆ ಗಂಡಂದಿರು ಭವಿಗಳು ಎಂಬ ಕಾರಣಕ್ಕೆ. ಒಬ್ಬಳ ಗಂಡ ರಾಜ, ಉಳಿದಿಬ್ಬರ ಗಂಡಂದಿರು ಜೈನರು. ಮಹಾದೇವಿ ನೇರ ಸವಾಲೆಸೆದು ಗಂಡನನ್ನು ತೊರೆದು ಬೆತ್ತಲಾಗಿ ಹೊರಟು ಮಲ್ಲಿಕಾರ್ಜುನನನ್ನು ಸೇರುತ್ತಾಳೆ. 'ಹೇರೂರ ಹೆಂಗಸು ಗಂಡುತನವಂ ಕೊಂಡು... ಮನವಾರೆ ಗಂಡಾದ ಸಂತೋಷವಂ ತೊಟ್ಟು...' ಈ ಸಂದಿಗ್ಧದಿಂದ ಪಾರಾಗುತ್ತಾಳೆ. ರಿಸಿಗಳಿಗೆ ಅಪಚಾರವಾಯಿತೆಂದು ಗಂಡನು ವೈಜಕವ್ವೆಯನ್ನು ಹೊಡೆದರೆ 'ಮದುವೆಯಾಗು ಹೋಗು ಮಗಳೆ ಮೆರೆವೆನಲ್ಲಿ ನಿನ್ನನ್ನು' ಎಂದು ಶಿವ ಅವಳ ಬೆನ್ನಿಗೇ ನಿಂತಿದ್ದಾನೆ. ಈ ಮೂವರು ಭಕ್ತೆಯರಿಗಿಂತಲೂ ಭಿನ್ನವಾಗಿ ನಿಂಬಿಯಕ್ಕ ತನ್ನ ಹೆಣ್ಣು ದೇಹವನ್ನು ಭಕ್ತಿಗೆ ಮೀಸಲಿರಿಸಿ 'ಇಂದು ಮೊದಲಾಗಿ ಎನ್ನ ಕಾಯವಂ ದೇವ ಬಂದ ಜಂಗಮಕ್ಕೊಪ್ಪು ಗುದುವೆನಿಂತಲೆ ದೇವ' ಎಂದು ನೇಮ ಹಿಡಿದಿದ್ದಾಳೆ.

ಭಕ್ತರ ಭಕ್ತಿ ಹಾಗೂ ಅವರ ಜೀವನ ಚರಿತ್ರೆಗಳೆದುರು ಈ ಭಕ್ತೆಯರ ಭಕ್ತಿ ಹಾಗೂ ಜೀವನ ಚರಿತ್ರೆಗಳನ್ನು ನಿಲ್ಲಿಸಿದಾಗ, ಈ ಸಮಾಜ ಹೆಣ್ಣಿಗೆಂದೇ ನಿರ್ಮಿಸಿರುವ ನಿರ್ಬಂಧ ನಿರ್ದೇಶನಗಳು ಹಾಗೂ ಯಾವುದೆ ನೆಲೆಯಲ್ಲೂ ಇವುಗಳನ್ನು ಮೀರಲಾಗದ ಸಂದಿಗ್ಧಕ್ಕೆ ಬೀಳುವ ಹೆಣ್ಣಿನ ಅವಸ್ಥೆಗಳನ್ನು ಸ್ಪಷ್ಟವಾಗಿ ಕಾಣಬಹುದು. ಭಕ್ತಿಯ ತಪಸ್ಸು ಪುರುಷನಿಗೆ ಮೋಕ್ಷವನ್ನು, ಕೈಲಾಸವನ್ನು ದೊರಕಿಸಬಹುದು. ಆದರೆ ಮಹಿಳೆಯ ಭಕ್ತಿಗೆ, ತಪಸ್ಸಿಗೆ ಈ ಬಗೆಯ ಬಿಡುಗಡೆಯ ಫಲ ದಕ್ಕಲಾರದು. ಬದಲಿಗೆ, ಅವಳು ಪುರುಷನಿಗೆ ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ, ಏನೂ ಅಲ್ಲವಾದರೆ ದೇಹವನ್ನೇ ಉಣಬಡಿಸುವ ಕಾಯಕ ಮಾಡಿಯೇ ಶಿವನ ಕರುಣೆಯನ್ನು ಸಾಧಿಸಬೇಕು.

ಈ ಅರ್ಥದಲ್ಲಿ ಸಮಕಾಲೀನ ಸಾಮಾಜಿಕ ವಾಸ್ತವವನ್ನು ಚರಿತ್ರೆಯಲ್ಲೂ ಗುರುತಿಸಬಹುದಾದ ಮಾದರಿಯಾಗಿ ಹರಿಹರನ ರಗಳೆಗಳ ಭಕ್ತೆಯರ ಜೀವನ ಚರಿತ್ರೆಗಳನ್ನು ನೋಡುವುದು ಸಾಧ್ಯ ಎನ್ನಬಹುದೇ ಹೊರತು, ಸ್ತ್ರೀವಾದಿ ಚಿಂತನೆ ಹಾಗೂ ಆ ಮಾದರಿಗಳನ್ನು ಇಲ್ಲಿ ಶೋಧಿಸಲು ತೊಡಗುವುದು ಕಷ್ಟ.

(ಕೃಪೆ : ಅನಿಕೇತನ ಜೂನ್ : ೦೨)

## ಶ್ರೀಮತಿ ಮೀರಾ ಕುಲಕರ್ಣಿ

ಹೋಗುವುದಾಗಿ ಹೇಳಿ ದಾದರ್‌ನಲ್ಲಿಯ ಕುರುಡು ಹೆಣ್ಣುಮಕ್ಕಳ ಶಾಲೆಗೆ ಕರೆದುಕೊಂಡು ಹೋದರು. ಅಲ್ಲಿನ ಕೆಲಸ ನೋಡಿ ನನಗೂ ಕುಲಕರ್ಣಿಯವರಿಗೂ ಬಹಳ ಸಂತೋಷವಾಯ್ತು. ಅಲ್ಲಿ ನಾನು ಬ್ರೇಲ್ ಕಲಿತೆ ಮತ್ತು ಅವರಿಗೆ ಪುಸ್ತಕಗಳನ್ನು ಬ್ರೇಲ್‌ನಲ್ಲಿ ಬರೆದುಕೊಡಲಾರಂಭಿಸಿದೆ. ನನಗೆ ಕರಕುಶಲ ಕಲೆಗಳಲ್ಲಿ ಪರಿಣತಿ ಇದ್ದುದು ತಿಳಿದ ಅಲ್ಲಿನ ಕರಕುಶಲ ಕಲೆಯ ಅಧ್ಯಾಪಿಕೆ ನನ್ನನ್ನು ಅದರಲ್ಲಿಯೂ ತೊಡಗಿಸಿಕೊಂಡರು. ನಾನು ಅವರಿಗೆ ಹೇಳಿ ಕೊಡುವುದು, ಅದನ್ನು ಅವರು ಅಲ್ಲಿನ ಮಕ್ಕಳಿಗೆ ಹೇಳಿ ಕೊಡುವುದು, ಹೀಗೆ ಸುಮಾರು ವರ್ಷ ನಡೆಯಿತು. ಈಗಲೂ ಆ ಸಂಸ್ಥೆಯೊಡನೆ ನನ್ನ ಸಂಪರ್ಕವಿದೆ. ಈ ವರಳಿಯ ಕನ್ನಡ ವನಿತಾ ಸಮಾಜಕ್ಕೆ ಸಹ ನಾನು ಮೊದಲು ಕಾಲಿಟ್ಟದ್ದು ಕುಲಕರ್ಣಿಯವರ ಪ್ರೋತ್ಸಾಹನೆಯಿಂದಲೆ. ಕನ್ನಡ ವನಿತಾ ಸಮಾಜದ ಕಾಗದಪತ್ರಗಳ ಕೆಲಸದಲ್ಲಿಯೂ ಸಹ ಅವರಿಂದ ಬಹಳ ಸಹಾಯವಾಗುತ್ತಿತ್ತು.

ನೇ. : ಈಗ ಮುಂದಿನ ಯೋಜನೆಗಳೇನು? ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ?

ಮೀ. : ಹೆಣ್ಣು ಮಕ್ಕಳಿಗೆ ಕಾನೂನುಗಳ ಮೂಲಕ ಅವರ ಹಕ್ಕುಬಾಧ್ಯತೆಗಳ ತಿಳುವಳಿಕೆ ಕೊಡುವುದು ಬಹಳ ಮುಖ್ಯ. ಇತ್ತೀಚೆಗೆ ನಾವು ಒಂದು ಚರ್ಚಾ ಕೂಟವನ್ನು ಏರ್ಪಡಿಸಿದ್ದು ಅದರಲ್ಲಿ ಹೆಸರಾಂತ ಸಮಾಜಿಕ ಕಳಕಳಿಯ ವ್ಯಕ್ತಿಗಳು ಭಾಗವಹಿಸಿದ್ದರು. ಇದಲ್ಲದೆ ನಾವು ತರಬೇತಿ ಕೊಡುವವರಿಗಾಗಿ ತರಬೇತಿ ಎಂಬ ಒಂದು ಕಾರ್ಯಕ್ರಮವನ್ನು ನಡೆಸಿದ್ದೇವೆ. ಇದು ಮತ್ತೆ ಮತ್ತೆ ನಡೆಯುತ್ತಲೇ ಇರಬೇಕಾದ ಕಾರ್ಯಕ್ರಮ. ಇದಕ್ಕೆ ನಮಗೆ ಮುನಿಸಿಪಲ್ ಶಾಲೆಗಳಿಂದ ಬಹಳ ಸಹಕಾರ ಸಿಕ್ಕಿದೆ. ಮುಖ್ಯವಾಗಿ ಇದು ೧೪-೧೮ರ ವಯಸ್ಸಿನ ಕಿಶೋರಾವಸ್ಥೆಯ ಮಕ್ಕಳಿಗಾಗಿ ನಡೆಸುವ ಕಾರ್ಯಕ್ರಮ. ಇದಲ್ಲದೆ ನಾನು ಹೆಚ್ಚು ಹೆಚ್ಚು ಮಧ್ಯಮ ವರ್ಗದವರಿಗಾಗಿ ಮಾರ್ಗದರ್ಶನದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಇಷ್ಟಪಡುತ್ತೇನೆ. ಅವರ ಸ್ಥಿತಿ ತ್ರಿಶಂಕು ಸ್ಥಿತಿಯಂತಾಗಿದ್ದು ಎಲ್ಲಿಯೂ ಆಸ್ಪದವಿಲ್ಲದಂತಾಗಿದೆ. ಹೀಗಾಗಿ ಅವರ ಆರೋಗ್ಯದ ಕಡೆಗೆ ಲಕ್ಷ್ಯಕೊಡಬೇಕಾಗಿದೆ. ಈಗಲಂತೂ ವೈದ್ಯಕೀಯ ಸೌಲಭ್ಯಗಳು ವಿಪರೀತ ದುಬಾರಿಯಾಗಿರುವುದರಿಂದ ಹೆಂಗಸರು ಅವರ ಆರೋಗ್ಯವನ್ನು ನಿರ್ಲಕ್ಷಿಸುವುದೇ ಹೆಚ್ಚು. ಇಂದಿನ ಅಲೋಪತಿ ಔಷಧಿಯಲ್ಲದೆ ಬೇರೆ ಪದ್ಧತಿಯ ಪರಿಚಯವನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ. ನಾವು ಇಂತಹ ಕಾರ್ಯಕ್ರಮಗಳಿಗೆ ಒತ್ತು ನೀಡಬೇಕೆನ್ನುತ್ತೇವೆ.

ನೇ. : ರಾಜಕೀಯ ಕ್ಷೇತ್ರದಲ್ಲಿ ಹೆಂಗಸರು ಹೆಚ್ಚಾಗಿ ಪ್ರವೇಶಿಸುತ್ತಿಲ್ಲ. ಅದಕ್ಕಾಗಿ ಅವರಿಗೆ ೩೩% ಆರಕ್ಷಣೆಯ ಅಗತ್ಯವಿದೆ ಎಂದು ಹೇಳುತ್ತಾರಲ್ಲ, ನಿಮ್ಮ ಅಭಿಪ್ರಾಯವೇನು?

ಮೀ. : ರಾಜಕೀಯ ನಮ್ಮ ಕ್ಷೇತ್ರವಲ್ಲ. ಈ ಬಗ್ಗೆ ನಾನು ಹೆಚ್ಚು ಚರ್ಚಿಸಲಾರೆ.

ನೇ. : ನಿಮ್ಮ ಕೆಲಸದಲ್ಲಿ ಸಫಲತೆ ದೊರಕಲಿ ಸಂದರ್ಶನಕ್ಕಾಗಿ ಧನ್ಯವಾದಗಳು.

•

*ಸರ್ವರಿಗೂ*
*ಯುಗಾದಿ ಹಬ್ಬದ*
*ಶುಭಾಶಯಗಳು*

# ವಿಮರ್ಶೆಯ ಗಾಂಭೀರ್ಯ

ಡಾ. ತಾಳ್ತಜೆ ವಸಂತಕುಮಾರ

ಬಹಳ ವರ್ಷಗಳ ಹಿಂದೆ, 'ಕನ್ನಡದ ಬೆಳೆಯೇನೋ ಹುಲುಸಾಗಿದೆ. ಆದರೆ ಕುಯ್ಯುವ ಕೈಗಳು ಕಡಮೆ' ಎಂದು ಬಿ. ಎಂ. ಶ್ರೀಕಂಠಯ್ಯನವರು ಆತಂಕಪಟ್ಟುಕೊಂಡಿದ್ದರು. ಇಂದಿನ ಸಾಹಿತ್ಯ ವಿಮರ್ಶೆಯ ಕ್ಷೇತ್ರವನ್ನು ಹತ್ತಿರದಿಂದ ಕಂಡಾಗ, ಕುಯ್ಯುವ ಕೈಗಳೇನೋ ಬೇಕಾದಷ್ಟಿವೆ, ಆದರೆ ಬೆಳೆ-ಕಳೆಗಳ ಅಂತರಗಳನ್ನಳೆಯಬಲ್ಲ ಕಣ್ಣುಗಳು ಕಡಮೆಯಾಗಿವೆಯೆನಿಸುತ್ತದೆ. ಈ ಪರಿಶ್ರಮದಿಂದ, ನಮ್ಮ ಕಣಜಗಳು ತುಂಬಿ ಬಿರಿಯುತ್ತವೆ: ಜೊಂಡು - ಜೊಳ್ಳುಗಳ ಮಧ್ಯೆ ಇರಬಹುದಾದ ಸತ್ತ್ವಯುತವಾದ ಗಟ್ಟಿ ಕಾಳುಗಳನ್ನು ಆಯುವ ಶ್ರಮ ಮತ್ತೂ ಅನಿವಾರ್ಯವಾಗುತ್ತದೆ. ಇಂಥ ಪರಿಸ್ಥಿತಿಯು, ನನ್ನ ಅಧ್ಯಾಪನ ವೃತ್ತಿ ಮತ್ತು ಸಾಹಿತ್ಯದ ವಿದ್ಯಾರ್ಥಿಯ ನಿಷ್ಠೆಗಳೆರಡನ್ನೂ ಕಂಗೆಡಿಸುತ್ತದೆ. ವಿಮರ್ಶೆಯ ಪರಿಸರವನ್ನೇ ವಿಮರ್ಶಿಸಬೇಕಾದ ಅಗತ್ಯವನ್ನು ಮನದಟ್ಟು ಮಾಡಿಕೊಡುತ್ತದೆ.

ಸಾಹಿತ್ಯ ವಿಮರ್ಶೆಯನ್ನುವುದೊಂದು ಯಾಂತ್ರಿಕ ಕರ್ಮವೂ ಅಲ್ಲ, ಗಣಿತದಂತೆ ಸೂತ್ರಾತ್ಮಕವೂ ಅಲ್ಲ. ಅದು ಚೇತೋಹಾರಿಯಾದ, ಸೃಜನಶೀಲವಾದ ಸಾಹಿತ್ಯ ಪರಿಚರ್ಯೆಯ ಪ್ರಧಾನ ವ್ಯವಸ್ಥೆಗಳಲ್ಲಿ ಒಂದಾಗಿದೆ. ವಿಮರ್ಶೆಗೆ ಹೊರಡುವ ವ್ಯಕ್ತಿಗೆ ಕ್ರಮಬದ್ಧವಾದ ಮಾನಸಿಕ ಸನ್ನದ್ಧತೆ, ಏಕಾಗ್ರವಾದ ಚಿಂತನಕ್ಷಮತೆ, ತಾತ್ತ್ವಿಕ ಪರಿಜ್ಞಾನ, ಜಿಜ್ಞಾಸು ಪ್ರವೃತ್ತಿ ಹಾಗೂ ಸ್ವಸ್ಥವಾದ ಸಮದೃಷ್ಟಿಗಳು ಇರಬೇಕಾಗುತ್ತವೆ. ಇಲ್ಲಿ ಕೃತಿಕಾರರ ಬಗೆಗಿನ ಸಹಾನುಭೂತಿಯಂಥ ಅನ್ಯಾನ್ಯ ದಾಕ್ಷಿಣ್ಯಗಳು, 'ಏನಕೇನ ಪ್ರಕಾರೇಣ ಪ್ರಸಿದ್ಧಿಗೆ ಬರಲೇಬೇಕೆನ್ನುವ ಹಠ, ಸ್ವಂತದ ಹೆಸರು ತಿಂಗಳಿಗೆ ಎಷ್ಟು ಬಾರಿ ಮುದ್ರಿತವಾಗಿದೆಯೆಂದು ಲೆಕ್ಕಾಚಾರ ಹಾಕುವ ಸ್ವ-ಲೋಲುಪತೆ, ವೈಯುಕ್ತಿಕ ರಾಗ ದ್ವೇಷಗಳೆಲ್ಲವೂ ನಿಷಿದ್ಧವೇ. ವಿಮರ್ಶೆಯ 'ಪವಿತ್ರ ಕಾಶಿ'ಯೊಳಗೆ ಇಂಥ ಸಾಹಿತ್ಯ ವಿರೋಧೀ ಪ್ರವೃತ್ತಿಗಳಿಗೆ ''ಹುಗಲಿಲ್ಲ'' !

ಈಗ ಎಲ್ಲ ಪ್ರಕಾರಗಳ ಸಾಹಿತ್ಯ ಕೃತಿಗಳ ಸಂಖ್ಯೆಯು ವೃದ್ಧಿಸುತ್ತಲೇ ಇದೆ. ಆದುದರಿಂದಲೇ ವಿಮರ್ಶಕನು, 'ಪ್ರಸ್ತುತ ಕೃತಿಯು ವಿಮರ್ಶೆಗೆ ಯೋಗ್ಯವಾಗಿದೆಯೇ?' ಎನ್ನುವ ಪ್ರಶ್ನೆಯನ್ನು ಮೊದಲಾಗಿ ಕೇಳಿಕೊಳ್ಳಬೇಕಾಗುತ್ತದೆ. ಅವನು ತನ್ನ ಹೊಣೆಯನ್ನು ಅರಿತುಕೊಂಡು ಈ ಆಯ್ಕೆಯನ್ನು ಮಾಡಬೇಕಾಗುತ್ತದೆ. ಏಂದರೆ ತಾನು ಸಾಹಿತಿ ಮತ್ತು ಸಹೃದಯರ ನಡುವಿನ ಸಂಪರ್ಕ ಮಾಧ್ಯಮವಾಗಿದ್ದೇನೆಂಬ ಎಚ್ಚರದೊಂದಿಗೆ ಅವನು ಮುಂದಡಿಯಿಡಬೇಕಾಗುತ್ತದೆ. ಮೇಲ್ನೋಟಕ್ಕೆ ತುಂಬ ಸರಳವಾಗಿ ಕಾಣಿಸುವ ಈ ಸಂದರ್ಭವು ವಿಶಿಷ್ಟವಾದ ಸಂಯಮವನ್ನು ನಿರೀಕ್ಷಿಸುತ್ತದೆ. ಇಲ್ಲಿ ಪ್ರೋತ್ಸಾಹವೆನ್ನುವುದು, ಲೇಖನಿಯ ಪಾವಿತ್ರ್ಯವನ್ನು ಭಂಗಗೊಳಿಸಬಾರದೆಂಬ ಜಾಗ್ರತೆಯಿದ್ದಾಗ ಮಾತ್ರವೇ ವಿಮರ್ಶೆಯು ಸಮರ್ಪಕವೂ ಸಾರ್ಥಕವೂ ಆಗುತ್ತದೆ.

ಒಂದು ದೃಷ್ಟಿಯಿಂದ ವಿಮರ್ಶಕನ ಸ್ವಾತಂತ್ರ್ಯವು ಸೀಮಾತೀತವಾದುದಾಗಿದೆ. ತಾನು ಕಂಡ ಸತ್ಯವನ್ನು ಹಾಗೆಯೇ ಲೋಕಮುಖದಲ್ಲಿ ಪ್ರಸ್ತುತ ಪಡಿಸುವ ಅವನ ನಿಲುವಿಗೆ ಯಾವುದೇ ಎಲ್ಲೆ ಕಟ್ಟಿರುವುದಿಲ್ಲ. ಇನ್ನೊಂದು ನೆಲೆಯಿಂದ, ಹಲವು ಶಕ್ತಿಗಳು ಅವನನ್ನು ನಿಯಂತ್ರಿಸುತ್ತಿರುತ್ತವೆ. ಸೃಷ್ಟಿಶೀಲ ಬರಹಗಾರನ ಮಾದರಿಯಲ್ಲಿ ಅವನು ಶಬ್ದಗಳನ್ನು ಮನಸೋ ಇಚ್ಛೆ ಬಳಸುವಂತಿಲ್ಲ. ಈ ನಿಯಮವನ್ನು ಉಲ್ಲಂಘಿಸಿ ದೊಡನೆಯೇ ಅವನು ಸಹೃದಯರ ವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ.

ಕೃತಿಯೊಂದನ್ನು 'ಆಕರ ಗ್ರಂಥ'ವೆಂದು ಅಪ್ಪಣೆ ಕೊಡಿಸುವ ಒಂದೇ ವಾಕ್ಯದ ಹಿಂದೆ ಹಲವು ತತ್ತ್ವಗಳಿರುತ್ತವೆ. ಹಾಗೆ 'ಘೋಷಿಸುವ' ವಿಮರ್ಶಕನು, ಆಕರ ಗ್ರಂಥದ ನಿರ್ವಚನ, ಸ್ವರೂಪ, ವ್ಯಾಪ್ತಿ, ಮೌಲ್ಯ ಮಾಪನದ ಮಾನದಂಡಗಳನ್ನು ಮನೋಗತ ಮಾಡಿಕೊಂಡಿರಬೇಕು. ಆ ಮಾನದಂಡಗಳು ಸ್ವೀಕೃತವಾದವುಗಳಾಗಿರಬೇಕು. ಆ ಪ್ರಕಾರದ ತಲಸ್ಪರ್ಶಿಯಾದ ಪರಿಜ್ಞಾನವನ್ನವನು ಪಡೆದಿರಬೇಕು. ಈ ಕಠಿಣ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೃತಿಗಷ್ಟೇ ಆ ಪ್ರಮಾಣ ಪತ್ರವನ್ನು ನೀಡಬೇಕೆಂಬ ನಿಸ್ಸ್ಪೃಹವಾದ ನಿಯಮವೂ ಅವನಿಗಿರಬೇಕು.

ಇದರ ನೇಪಥ್ಯದಲ್ಲಿ ಕೃತಿಯೊಂದನ್ನು ವಿಮರ್ಶಿಸುವ ತನ್ನ 'ಅಧಿಕಾರ'ದ ಪರಾಮರ್ಶೆಯನ್ನೂ ವಿಮರ್ಶಕನು ನಡೆಸಬೇಕಾಗುತ್ತದೆ. ಒಂದು ಕೃತಿಯನ್ನು ಓದುವುದಕ್ಕೂ, ಗ್ರಹಿಸುವುದಕ್ಕೂ ಮೂಲಭೂತವಾದ ವ್ಯತ್ಯಾಸಗಳಿವೆ. ಜೀವಂತ ಮನುಷ್ಯನ ನಾಡಿಯು ಮಿಡಿಯುತ್ತದೆನ್ನುವುದು ಎಲ್ಲರಿಗೂ ಅನುಭವ ವೇದ್ಯವಾಗುವ ಸಂಗತಿಯಾಗಿದೆ. ಆದರೆ, ಅದರ ಗತಿಯನ್ನೂ ಪರಿಣಾಮಗಳನ್ನೂ ಗಣಿಸಿ, ರೋಗನಿದಾನ ಮಾಡುವುದಕ್ಕೆ ವೈದ್ಯಕೀಯ ಪರಿಣತಿಯು ಅಗತ್ಯವಾಗುತ್ತದೆ. ತನಗೆ ಪ್ರವೇಶವಿಲ್ಲದ ವಿಚಾರದಲ್ಲಿ ಅಭಿಪ್ರಾಯಗಳನ್ನು ಮಂಡಿಸುವ ಚಪಲವು ಅನೇಕ ಅಪಾಯಗಳನ್ನು ಆಹ್ವಾನಿಸುತ್ತದೆಂದು ಹೇಳದೆ ನಿರ್ವಾಹವಿಲ್ಲ.

ಇಂದಿನ ಬಹುಪಾಲು ವಿಮರ್ಶಕರು ಸಿದ್ಧ ಮಾದರಿಗಳನ್ನು ಅನುಸರಿಸುತ್ತಾರೆ. ಕೇವಲ ಕೃತಿಗಳ ಹೆಸರು, ಕವನ, ಅಥವಾ ಪಾತ್ರಗಳು, ಉದ್ಧರಣೆಗಳು ಬದಲಾಗುತ್ತವೆ. ಉಳಿದಂತೆ, ಒಂದೇ ಬಗೆಯ ಅಭಿವ್ಯಕ್ತಿ ಕ್ರಮಗಳು, ಅನಿಸಿಕೆಗಳು, ಆಶಯಗಳು, ತೀರ್ಮಾನಗಳು ಅಲ್ಪಸ್ವಲ್ಪ ರೂಪಾಂತರಗಳೊಂದಿಗೆ ಮತ್ತೆ ಮತ್ತೆ ಅವತರಿಸುತ್ತಿರುತ್ತವೆ. ತಾವು ಬಳಸುತ್ತಿರುವ ಭಾಷೆಯ ಸಾಮಂಜಸ್ಯದ ಬಗೆಗೂ ಗಮನವೀಯಲಾರದ ಇಂಥ 'ಸ್ವಯಂ ಘೋಷಿತ' ವಿಮರ್ಶಕರ ಬರಹಗಳನ್ನು ಒರೆಗೆ ಹಚ್ಚಲು ಬೇರೆಯೇ ಮೀಮಾಂಸಕರು ಹಾಗೂ ಹೊಸ ಮೀಮಾಂಸೆಗಳು ಸೃಷ್ಟಿಯಾಗಬೇಕೋ ಏನೋ !

ಕನ್ನಡ ಭಾಷೆ - ಸಾಹಿತ್ಯಗಳಿಗೆ ಶಾಸ್ತ್ರೀಯ ಸ್ಥಾನವು ಸಿಗಬೇಕೆಂಬುದು ಕನ್ನಡಿಗರೆಲ್ಲರ ಕನಸಾಗಿದೆ. ಅದರೊಂದಿಗೆ ಕನ್ನಡ ಮನಸ್ಸುಗಳು ಅಧ್ಯಯನ - ಅಧ್ಯಯನೇತರ ಶಿಸ್ತುಗಳನ್ನು ಅಳವಡಿಸಿಕೊಳ್ಳ ಬೇಕೆಂಬುದು ನನ್ನಂಥ ಹಲವರ ಕಳಕಳಿಯಾಗಿದೆ. ಶಾಸ್ತ್ರೀಯವಾಗಿ ಯೋಚಿಸಬಲ್ಲ ಹಂತಕ್ಕೆ ನಮ್ಮನ್ನು ನಾವೇ ಬೆಳೆಸಿಕೊಳ್ಳುವುದು ನಮ್ಮ ಆದ್ಯತೆಯಾಗಬೇಕಾಗಿದೆ.

ಕೇವಲ ಕೃತಿಯ ಮುನ್ನುಡಿ - ಬೆನ್ನುಡಿಗಳ ಮೇಲೆ ಕಣ್ಣು ಹಾಯಿಸಿ ವಿಮರ್ಶೆಯನ್ನು ರೂಪಿಸುವುದು, ಕಥೆ ಅಥವಾ ಕವನದ ವಸ್ತುಗಳನ್ನೇ ತಮ್ಮ ವಾಕ್ಯಗಳಲ್ಲಿ ಪುನರಾವರ್ತನೆ ಮಾಡುವುದು, ಕೃತಿಯ ಸಂದರ್ಭಕ್ಕೆ ಯಾವ ರೀತಿಯಿಂದಲೂ ಸಂಬಂಧಿಸಿರದ ದಾಸರ ಪದಗಳನ್ನೋ, ವಚನಗಳ ಉಲ್ಲೇಖಗಳನ್ನೋ ಎಳೆದು ತಂದು ಪುಟ ತುಂಬಿಸುವುದು, ಪದಗಳ ದುಂದುವೆಚ್ಚವನ್ನೇ ವಿಮರ್ಶೆಯೆಂದು ಸಂಭ್ರಮಿಸಿ ಸುಖಿಸುವುದು, ಈಗಾಗಲೇ ಹೆಸರು ಮಾಡಿದ್ದೇನೆಂದುಕೊಳ್ಳುತ್ತಾ, ತಿದ್ದುಪಡಿಯ ಅಗತ್ಯವೇ ತನಗಿಲ್ಲವೆಂಬ ತೃಪ್ತಿಯ ಆಭಾಸದಲ್ಲಿ ವಿರಮಿಸುವುದು ಅಡ್ಡ ಹಾದಿಗಳನ್ನು ಹಿಡಿಯುತ್ತಿರುವ ವಿಮರ್ಶೆ ಕೆಲವು ಉದಾಹರಣೆಗಳಷ್ಟೇ ಆಗಿವೆ.

ವಿಮರ್ಶೆಯು ಒಂದು ಸಂಸ್ಕರಣ ಸ್ಥಾವರವಿದ್ದ ಹಾಗೆ. ಒಂದು ಬರಹವು ಅಸ್ತಿತ್ವಕ್ಕೆ ಬರುವುದರ ಹಿಂದಿನ ಅನೇಕ ಕ್ರಿಯಾ ಸರಣಿಗಳು ಅಲ್ಲಿ ನಡೆಯುತ್ತಿರುತ್ತವೆ. ಕೃತಿಯ ಅಂತರಂಗ ದರ್ಶನವನ್ನು ಕೂಲಂಕಷವಾಗಿ ಮಾಡಿಕೊಳ್ಳುವ ಸಾಮರ್ಥ್ಯವಿರುವ, ಭಾಷೆಯ ಪ್ರಯೋಗಗಳ ಬಗೆಗೆ ಗಂಭೀರವಾದ ಕಾಳಜಿಗಳಿರುವ, ಬುದ್ಧಿ - ಭಾವಗಳ ಸಮನ್ವಯದಲ್ಲಿ ನಂಬಿಕೆಯಿರುವ ವಿಮರ್ಶಕರು ಸಮಕಾಲೀನ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಬೇಕಾಗಿದೆ. ವಿಮರ್ಶೆಯನ್ನು ಸರಿದಾರಿಗೆ ಹಚ್ಚಬೇಕಾಗಿದೆ.

ವಾರಕ್ಕೆ ಮೂರು ಬೇರೆ ಬೇರೆ ಪ್ರಕಾರಗಳ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿ, ಅವುಗಳನ್ನು ವಿಮರ್ಶಿಸುವ 'ಸಾಹಸ ಪ್ರವೃತ್ತಿ'ಯು ಇತ್ತೀಚೆಗೆ ಹೆಚ್ಚಾಗುತ್ತಿರುವುದನ್ನು ಕಂಡಾಗ ನನಗೆ ದಿಗ್ಭ್ರಮೆಯಾಗುತ್ತದೆ. ಕಾವ್ಯ ಕೃತಿಯೊಂದನ್ನು ವಿಮರ್ಶಿಸುವಾಗಿನ ಮಾನಸಿಕ ಸ್ಥಿತಿ ಭಾವ ಸಾಂಗತ್ಯಗಳಿಂದ, ಯಾವ ಪೂರ್ವ ತಯಾರಿಯೂ ಇಲ್ಲದೆ ಪ್ರವಾಸ ಕಥನವೊಂದರ ಕಕ್ಷೆಯನ್ನು

ಪ್ರವೇಶಿಸುವ ಈ ಲಾಘವ ಶಕ್ತಿಯು, ವಿಮರ್ಶೆಯ ಗುರುತ್ವ - ಆಕರ್ಷಣೆಗಳೆರಡನ್ನೂ ಕಸಿದು ಬಿಟ್ಟಿದೆ !

ಇಂದಿನ ವಿಮರ್ಶೆಯು ಒಂದು ಪ್ರತ್ಯೇಕ ಶಿಸ್ತಾಗಿ ಬೆಳೆಯುತ್ತಿದೆ. ಅದಕ್ಕೆ ವಿಶಿಷ್ಟವಾದ ಪರಿಭಾಷೆ ಹಾಗೂ ವ್ಯಾಕರಣಗಳಿವೆ. ಸಮೀಕ್ಷೆ, ಪರಿಚಯ, ವಿಶ್ಲೇಷಣೆ ಹಾಗೂ ವಿಮರ್ಶೆಯ ಪರಿಕಲ್ಪನೆಗಳಲ್ಲಿ ಸೂಕ್ಷ್ಮ ಹಾಗೂ ಸ್ಥೂಲವಾದ ಭೇದಗಳಿವೆ. ಉದಾಹರಣೆಗೆ, ಉನ್ನತ ಅಧ್ಯಯನದ ದೃಷ್ಟಿಯಿಂದ ಕೃತಿಯೊಂದನ್ನು ಕಾಣುವುದಕ್ಕೂ, ಜನಪ್ರಿಯ ನಿಯತಕಾಲಿಕೆಯೊಂದರ ಅಂಕಣ ಬರೆಹಕ್ಕೂ, ಸಂಭಾವನಾ ಗ್ರಂಥಗಳಲ್ಲಿ ಎಡೆಪಡೆಯುವ ವಿಶ್ಲೇಷಣೆಗಳಿಗೂ, ''ಕನ್ನಡ ಅಧ್ಯಯನ''ದಂಥ' ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಮರ್ಶೆಗಳಿಗೂ ವಿಭಿನ್ನ ಸ್ವರೂಪ ಹಾಗೂ ಉದ್ದೇಶಗಳು ಇರುತ್ತವೆಂಬುದು ಸ್ಪಷ್ಟವೇ ಇದೆ. ಹಾಗೆಯೇ ಅವುಗಳ ಓದುಗ ವರ್ಗಗಳಲ್ಲಿಯೂ ವ್ಯತ್ಯಾಸಗಳಿವೆ. ಅವನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಒರೆಸಿ ಹಾಕಿ ಎಲ್ಲವನ್ನು 'ವಿಮರ್ಶೆ'ಯೆಂದು ಕರೆಯುವಂತಿಲ್ಲ.

ವಿಮರ್ಶೆಯು ನಿಗದಿ ಗೊಳಿಸಿದ ವಿಧಿ - ನಿಷೇಧಗಳನ್ನು ಮಾನ್ಯ ಮಾಡುವ ವಿಮರ್ಶಕನು ಕೃತಿಯೊಂದರ ಸಾಹಿತ್ಯಿಕ - ಸಾಂಸ್ಕೃತಿಕ - ಚಾರಿತ್ರಿಕ ಸಂದರ್ಭಗಳ ಚೌಕಟ್ಟಿನೊಳಗೇ ಅದನ್ನಿಟ್ಟು ನೋಡುತ್ತಾನೆ. ಅದರ ಉದ್ದೇಶ - ಲಕ್ಷ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾನೆ. ಆ ಬೆಳಕಿನಲ್ಲಿ ಅದರ ಸಾಫಲ್ಯ - ವೈಫಲ್ಯಗಳನ್ನು ಶೋಧಿಸುತ್ತಾನೆ. ಇಲ್ಲಿ, ಅದರಲ್ಲಿರದ ಯಾವುದೋ ಅಂಶವನ್ನು ಎತ್ತಿ ಹೇಳುತ್ತಾ, 'ವಿಮರ್ಶೆಯಲ್ಲಿ - ಪ್ರಾಚೀನ ಸಾಹಿತ್ಯದಲ್ಲಿ ಅಷ್ಟಾದಶ ವರ್ಣನೆಗಳಿದ್ದ ಹಾಗೆ - ಕೊರತೆಗಳನ್ನು ಸೂಚಿಸಲೇ ಬೇಕು' ಎಂಬ ಗೃಹೀತಗಳಿಗೆ ಸ್ಥಾನವಿರಬಾರದು. ಬದಲಿಗೆ ಕೃತಿಯ ವೈಶಿಷ್ಟ್ಯಗಳನ್ನು ದೊಡ್ಡು ಮಾಡಿ ತೋರಿಸುವ ಸಹೃದಯತೆ, ಮಿತಿಗಳನ್ನು ಸೂಚಿಸುವ ನೈಪುಣ್ಯ, ಸುಧಾರಣಾ ವಿಧಾನಗಳನ್ನು ವಿವರಿಸಬಲ್ಲ ತಜ್ಞತೆಗಳು ಮುಖ್ಯವೆನಿಸುತ್ತವೆ ಎಂದರೆ ಕೃತಿಯ ಎಲ್ಲ ಸೂಕ್ಷ್ಮಗಳನ್ನು ಗ್ರಹಿಸುವ ಹಾಗೂ ಅವುಗಳನ್ನು ತದ್ವತ್ತಾಗಿ ತನ್ನ ಓದುಗರ ಗ್ರಹಿಕೆಗಳಿಗೆ ಒದಗಿಸುವ ಸಂವಹನ ಶಕ್ತಿಯು ಇಲ್ಲಿ ವಿನಿಯೋಗ ಗೊಳ್ಳಬೇಕಾಗುತ್ತದೆ.

ಕೃತಿಯ ಪ್ರಧಾನ, ಆನುಷಂಗಿಕ ಮತ್ತು ಪರೋಕ್ಷ ಲಕ್ಷ್ಯಗಳನ್ನು ಆಯಾ ಸಂದರ್ಭಗಳಲ್ಲಿಟ್ಟು ನೋಡುವ ತಿಳಿಯಾದ ಮನಸ್ಸು ಇಲ್ಲಿ ಕ್ರಿಯಾಶೀಲವಾಗುತ್ತದೆ. ಉದಾಹರಣೆಗೆ, ಎಸ್.ಎಲ್. ಭೈರಪ್ಪನವರ 'ಸಾರ್ಥ'ದಂಥ ಕೃತಿಯನ್ನು ಧಾರ್ಮಿಕ ಸಂಕೀರ್ಣತೆ ಗೊಂದಲಗಳಿಂದ ಬಿಡಿಸಿಕೊಂಡು ವ್ಯಕ್ತಿತ್ವದ ಪಲ್ಲಟಗಳೇ ಅದರ ಆಸಕ್ತಿಯ ಕೇಂದ್ರಗಳೆನ್ನುವ ಅರಿವಿನೊಂದಿಗೆ ವಿಮರ್ಶಿಸಬೇಕಾಗುತ್ತದೆ. ಅದರ ಪರಿಧಿಯಂಚಿನ ಮತೀಯ ಸಂಘರ್ಷಗಳೋ, ತಾತ್ವಿಕ ತಾಕಲಾಟಗಳೋ ವಿಮರ್ಶೆಯ ಮುನ್ನೆಲೆಗೆ ಬಂದಾಗ, ಅದರ ಹಾಳತವು ತಪ್ಪುತ್ತದೆ. ಕೃತಿಯ ಪಾರ್ಶ್ವನೋಟವಷ್ಟೇ ಸಾಧ್ಯವಾಗುತ್ತದೆ.

ಈ ಎಲ್ಲಾ ಪರಿವೆಗಳೊಂದಿಗೆ, ಕೃತಿಯ ಸ್ಥಾನ ನಿರ್ದೇಶನವನ್ನು ಮಾಡುವ ನೈತಿಕ ನೆಲೆಗಟ್ಟೂ ವಿಮರ್ಶಕನಿಗಿರಬೇಕಾಗುತ್ತದೆ. ಆಗ, ಹತ್ತಾರು ಪುಟಗಳಷ್ಟೇ ಇರುವ ಪುಸ್ತಿಕೆಯೊಂದನ್ನು ಮಹಾಕಾವ್ಯವೆಂದಾತ ಕರೆಯುವುದಿಲ್ಲ. ಮೊದಲ ಪಂಕ್ತಿಯ ಸಾಹಿತಿಗಳ ಕೃತಿಗಳಲ್ಲಿ ಕಣ್ತಪ್ಪಿನಿಂದ ನುಸುಳುವ ಅಕ್ಷರ ವಾಕ್ಯ ದೋಷಗಳನ್ನಾತ ತನ್ನ ವಿಮರ್ಶೆಯಲ್ಲಿ ಪ್ರಸ್ತಾಪಿಸುವುದಿಲ್ಲ. ದೀರ್ಘವಾದ, ಅನಗತ್ಯವಾದ ಉದ್ಧಾರಣೆಗಳನ್ನು ಪೋಣಿಸುತ್ತಾ, ''ಹೀಗೆನ್ನುತ್ತಾರೆ.'' ''ಎನ್ನಲಾಗಿದೆ'' ಮುಂತಾಗಿ ಪರಾ ಬರೆಯುವುದಿಲ್ಲ. ನಿಜವಾಗಿಯೂ ತೂಕವಿರುವ, ಸ್ವಂತಿಕೆಯ ಬೆಲೆಯರಿತ 'ವಿಮರ್ಶೆ'ಯೆಂಬ ಹೆಸರಿಗೆ ಗೌರವ ತರುವಂಥ ಬರಹಗಳಿಗಷ್ಟೆ ಆಗ ಅನುವು ದೊರೆಯುತ್ತದೆ.

---

## ಜಗ ಚೆಲುವೆನ್ನುವ ಬಗೆಗಳ ಅನುರಣನ : ಪು.ತಿ.ನ. ಸಂಸ್ಮರಣೆ

ಮೂರನೆಯ ದಿನ, ಕರ್ನಾಟಕ ಸಂಘದಲ್ಲಿ ಮೂರು ಉಪನ್ಯಾಸಗಳು ಜರಗಿದವು. ''ಕುವೆಂಪು ಅವರ ಚತುರ್ಮುಖಿ ಪ್ರತಿಭೆ''ಯ ಬಗೆಗೆ ಡಾ. ಜಿ. ಎಸ್. ಶಿವರುದ್ರಪ್ಪನವರು ಕೆ.ಎಸ್.ನ. ಅವರ ಕಾವ್ಯವು ಹಿಡಿದ ''ಇಹದ ಪರಿಮಳದ ಹಾದಿ''ಯ ಕುರಿತು ಡಾ. ಎಚ್. ಎಸ್. ವೆಂಕಟೇಶಮೂರ್ತಿಯವರು, ''ಬೇಂದ್ರೆಯವರ ಕಾವ್ಯದಲ್ಲಿ ನಾರೀಭಾವ''ದ ವಿಚಾರವಾಗಿ ಡಾ. ಎಚ್.ಎಸ್. ರಾಘವೇಂದ್ರರಾಯರು ತುಂಬ ವಿಶಿಷ್ಟವಾಗಿ ಈ ಮೂರೂ ನೆಲೆಗಳನ್ನು ವಿಶ್ಲೇಷಿಸಿದರು.

ಈ ಎಲ್ಲ ಬೌದ್ಧಿಕ ಚಟುವಟಿಕೆಗಳ ಸಾರವನ್ನು ಗ್ರಹಿಸಿದ ತಮ್ಮ 'ಅವಲೋಕನ'ವನ್ನು ವಿಭಾಗದ ಉಪನ್ಯಾಸಕರಾದ ಡಾ. ಜಿ.ಎನ್. ಉಪಾಧ್ಯ, ಮಂಡಿಸಿದರು.

ಸಮಾರಂಭದ ಅಂಗವಾಗಿ ಪ್ರಸ್ತುತಗೊಂಡ ಶ್ರೀ ಚಂದ್ರಶೇಖರ ಕೆದ್ಲಾಯರ ಭಾವಗೀತೆಗಳು, ಮೈಸೂರು ಅಸೋಸಿಯೇಷನ್ನಿನ ಲಲಿತ ಕಲಾ ವೃಂದದವರ 'ಗೋಕುಲ ನಿರ್ಗಮನ' ದೃಶ್ಯ - ಶ್ರವ್ಯ ಕಾರ್ಯಕ್ರಮ, ಮೈಸೂರು ಸಂಗೀತ ವಿದ್ಯಾಲಯ, ಡೊಂಬಿವಲಿಯ ಕಲಾವಿದರಿಂದ ಸುಗಮ ಸಂಗೀತ ಹಾಗೂ ಬೆಂಗಳೂರಿನ ಬೆನಕ ತಂಡದಿಂದ ''ಗೋಕುಲ ನಿರ್ಗಮನ'' ನಾಟಕಗಳು ಸಹೃದಯರಿಂದ ವಿಶೇಷವಾದ ಮೆಚ್ಚುಗೆಗಳನ್ನು ಗಳಿಸಿದುವು.

ಶ್ರೀ ರಾಮಚಂದ್ರ ಪಾಂಗಣ್ಣಾಯ, ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ಶ್ರೀ ನವನೀತ ರಾವ್ ಇವರು ಸಂಗೀತ ಕಾರ್ಯಕ್ರಮಗಳಿಗೆ ಪಕ್ಕವಾದ್ಯಗಳನ್ನು ನೀಡಿದರು.

ಶ್ರೀಮತಿ ರೇಖಾ, ಎನ್.ವಿ., ಡಾ. ಗಿರಿಜಾ ಶಾಸ್ತ್ರಿ, ಡಾ. ಶಾರದಾ ಗದ್ವಾಲ್, ಶ್ರೀಮತಿ ಸುಮನ್ ಚಿಪ್ಳೂಣ್‌ಕರ್, ಶ್ರೀ ಮಹೇಶ್ ಹೆಗ್ಡೆ, ಶ್ರೀಮತಿ ಮಮತಾ ರಾವ್, ಶ್ರೀ ಭರತ್‌ಕುಮಾರ ಪೊಲಿಪು, ಶ್ರೀ ಓಂದಾಸ್ ಕಣ್ಣಂಗಾರ್ ಹಾಗೂ ವಿಭಾಗದ ವಿದ್ಯಾರ್ಥಿಗಳು ನಿರ್ವಹಣೆ, ವಂದನಾರ್ಪಣೆ, ಸನ್ಮಾನ ಪತ್ರ ವಾಚನ ಮುಂತಾದ ಬೇರೆ ಬೇರೆ ಜವಾಬ್ದಾರಿಗಳನ್ನು ನಿರ್ವಹಿಸಿ ಸಹಕರಿಸಿದರು.

- ಡಾ. ತಾಳ್ತಜೆ ವಸಂತಕುಮಾರ

---


### STATEMENT ABOUT OWNERSHIP AND OTHER PARTICULARS OF NESARU TINGALOLE

| | | |
|---|---|---|
| 1. Place of Publication | : | Mumbai |
| 2. Perdiodicity of Publication | : | Monthly |
| 3. Printer's Name | : | Aarati Art Printers |
| Citizenship | : | India |
| Address | : | 101, Varma Chambers, 11, Homji Street, Fort, Mumbai-400 001. |
| 4. Publisher's Name | : | M. A. N. Prasad |
| Citizenship | : | India |
| Address | : | C/o. The Mysore Association, 393, Bhaudaji Road, Matunga, Mumbai-400 019. |
| 5. Editor's Name | : | M. A. N. Prasad |
| Citizenship | : | India |
| Address | : | C/o. The Mysore Association, 393, Bhaudaji Road, Matunga, Mumbai-400 019. |
| 6. Name & Address of the Owner of Newspaper | : | The Mysore Association, 393, Bhaudaji Road, Matunga, Mumbai-400 019. |

I, M. A. N. Prasad hereby declare that the particulars given above are true to best of my knowledge and belief.

# ಆದರ್ಶ ನಗರ ಅಯೋಧ್ಯೆ

- ವಾಸುದೇವ ಕಾಣಿಮಾರ್

ಅಯೋಧ್ಯೆಯಲ್ಲಿ ಅಚ್ಚುಕಟ್ಟಾದ ರಾಜ್ಯಭಾರಕ್ರಮವಿತ್ತೆಂಬುದು 'ರಾಮಾಯಣ' ಗ್ರಂಥದಿಂದ ತಿಳಿದು ಬರುತ್ತದೆ. ಅದು ಎಷ್ಟು ಸುಭದ್ರವಾಗಿತ್ತೆಂದರೆ ಯೋಧರು ಯುದ್ಧಮಾಡಿ ಗೆಲ್ಲಲು ಅಸಾಧ್ಯವಾದುದು! ಎಂಬ ಹೆಸರು ಅದಕ್ಕೆ ಅನ್ವರ್ಥನಾಮವಾಗಿತ್ತು. ನಗರಕ್ಕೆ ದೊಡ್ಡ ಪ್ರಾಗಾರಗಳಿದ್ದು ದ್ವಾರಗಳಲ್ಲಿ ಅಗುಳಿಗಳಿದ್ದವು. ಅದು ಸರಯೂ ನದಿ ದಕ್ಷಿಣ ತೀರದಲ್ಲಿ ಹನ್ನೆರಡು ಯೋಜನ ಉದ್ದವಾಗಿಯೂ ಮೂರು ಯೋಜನ ಅಗಲವಾಗಿಯೂ ಹರಡಿತ್ತಂತೆ (ಇಂದಿನ ಪಾಟ್ನಾ ನಗರವು ಎಂಟು ಮೈಲುದ್ದ ಎರಡು ಮೈಲಿ ಅಗಲಿರುವಂತೆ) ದೊಡ್ಡ ದೊಡ್ಡ ರಸ್ತೆಗಳು ಈ ಮಹಾನಗರದಲ್ಲಿ ಹರಡಿದ್ದವು. ನಗರವನ್ನು ಪಗಡೆ ಮನೆಯ ಆಕಾರದಲ್ಲಿ ಕಟ್ಟಲಾಗಿತ್ತು. ಎಲ್ಲೆಲ್ಲೂ ಮರಗಳಿಂದ ಕಟ್ಟಿದ ಉಪ್ಪರಿಗೆ ಮನೆಗಳು ಏಳಂತಸ್ತಿನ ಮನೆಯೂ ಇದ್ದಿತೆಂದು ಹೇಳಲಾಗಿದೆ. ನೀರನ್ನು ಚಿಮುಕಿಸಿ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿದ್ದರಂತೆ. ಅಂಗಡಿಗಳು ಕ್ರಮಬದ್ಧವಾಗಿ ಅಲ್ಲಿ ವಿಂಗಡಿಸಲ್ಪಟ್ಟಿದ್ದವಂತೆ. ನಾನಾ ಕುಶಲ ಕಲೆ ವೃತ್ತಿಗಳಲ್ಲಿ ನಿಪುಣರಾಗಿದ್ದವರು ವಾಸವಾಗಿದ್ದರಂತೆ. ನಗರದೊಳಗೆ ಪ್ರಜೆಗಳಿಗಾಗಿ ಕ್ರೀಡಾ ಗೃಹಗಳು ಮಹಿಳೆಯರಿಗೆಂದು ನೃತ್ಯ ಶಾಲೆಗಳೂ ಇದ್ದವು. ಅಲ್ಲಿ ವೀಣೆ, ಮೃದಂಗ, ಮದ್ದಲೆ ಮತ್ತು ಶಂಖದುಂದುಭಿ ವಾದ್ಯಗಳ ಸಂಗೀತ ಮತ್ತು ಮಂಗಳಧ್ವನಿ ಕೇಳಿಸುತ್ತಿತ್ತು. ನಗರವು ಧನಧಾನ್ಯಗಳಿಂದ ಸಮೃದ್ಧವಾಗಿ ಎಲ್ಲೆಲ್ಲೂ ಶಾಲಿಧಾನ್ಯ ಮತ್ತು ಸಿಹಿನೀರು ಯಥೇಚ್ಛವಾಗಿ ಸಿಗುತ್ತಿತ್ತು. ಜನರು ಶುದ್ಧ ಶುಭ್ರ ಉಡುಗೆ, ಸೌಜನ್ಯ, ಸದಾಚಾರಗಳಲ್ಲಿ ಸಂತೋಷಪಡತಕ್ಕವರೂ ಧರ್ಮಶೀಲರೂ ಸಂಯಮಿಗಳೂ ಆಗಿದ್ದರು. ಅಲ್ಲಲ್ಲಿ ಉದ್ಯಾನಗಳು ಮಾವಿನ ತೋಪುಗಳೂ ಇದ್ದವು. ಸುಶಿಕ್ಷಿತ ಬ್ರಾಹ್ಮಣರೂ, ಯೋಧರೂ, ವೈಶ್ಯರೂ ಹಾಗೆಯೇ ಋಷಿಗಳೂ ವಾಸವಾಗಿದ್ದರು. ಅಲ್ಲಿ ವ್ಯಾಸಂಗಕ್ಕಾಗಿ ನಾನಾ ದೇಶಗಳಿಂದ ಬಂದು ಜನರು ಸೇರುತ್ತಿದ್ದುದಲ್ಲದೆ ಸಾಮಂತರಾಜರು ಅಧಿರಾಜನ ಸಂದರ್ಶನಕ್ಕಾಗಿ ಬರುತ್ತಿದ್ದರು. ಅಯೋಧ್ಯೆಯು ಕೋಸಲವೆಂಬ ಅತಿ ಪ್ರಾಚೀನವಾದ ರಾಜ್ಯದ ರಾಜಧಾನಿ. ಅಲ್ಲಿ ಯುದ್ಧೋಪಯುಕ್ತವಾದ ಅನೇಕ ಬಗೆಯ ಆಯುಧಗಳೂ ಯಂತ್ರಗಳೂ ಶತಘ್ನಿಗಳೂ ಇರುತ್ತಿದ್ದುದಲ್ಲದೆ ಉತ್ತಮ ಅಶ್ವಗಳು, ಗಜಗಳು, ಹಸು ಮುಂತಾದ ಸಾಕು ಪ್ರಾಣಿಗಳು ಇರುತಿದ್ದವು. ಆಗಿನ ಯೋಧರಿಗೆ ಮಲ್ಲಯುದ್ಧ ಮತ್ತು ವನವಿಹಾರ ಮೃಗಯೆಗಳು ಇಷ್ಟವಾಗಿತ್ತೆಂದು ವಿವರವಾಗಿ ಹೇಳಿದೆ ಅಯೋಧ್ಯಾ ಕಾಂಡದಲ್ಲಿ.

ಅಯೋಧ್ಯೆಯನ್ನು ಮೊದಲ ಮನುಷ್ಯ ಮನುವೇ ನಿರ್ಮಿಸಿದ್ದನೆಂದು ಹೇಳಿದರೆ ಅದು ಅನಾದಿಯಾಗಿ ಇರುವುದೇ ಆಗಿದೆ. ಅದಕ್ಕೆ ಸತ್ಯನಗರಿ, ಸಾಕೇತ ಎಂಬ ಹೆಸರುಗಳೂ ಬಳಕೆಯಲ್ಲಿದ್ದವೆಂದು ಬಾಲಕಾಂಡ ಆರನೇ ಸರ್ಗದಲ್ಲಿ ಹೇಳಿದೆ. ಅದರ ನಾಗರಿಕರು ಸುಖಿಗಳೂ ಸತ್ಯವಾಚಕರುಗಳೂ (ಮಾತು ಕೊಟ್ಟಂತೆ ಆಡುವ ಪ್ರಾಮಾಣಿಕರು) ಆಗಿದ್ದರು. ನಿಜವಾಗಿಯೂ ಆರ್ಯ (ಸಭ್ಯ) ಜನರಾಗಿದ್ದರು. ಮತ್ತು 'ಆರ್ಯ' 'ಆರ್ಯ' ಎಂದೇ ಒಬ್ಬರನ್ನೊಬ್ಬರು ಸಂಬೋಧಿಸುತ್ತಿದ್ದರು. ಇಂದಿಗೆ ನಾವು ನಾಗರಿಕನೊಬ್ಬನಿಗೆ ಹೊಟ್ಟೆಗೆ ಪುಷ್ಟಿಯಾದ ಅನ್ನ, ಹೊದ್ದುಕೊಳ್ಳಲು ಯೋಗ್ಯವಾದ ಬಟ್ಟೆ, ವಾಸಕ್ಕೆ ಸ್ವಂತದ ಮನೆ, ನಿಶ್ಶುಲ್ಕ ಶಿಕ್ಷಣ, ಆರೋಗ್ಯ ಸಾಧನಗಳು, ಸಂಚಾರಾವಕಾಶ? ಉಪಜೀವನಕ್ಕೆ ನಿಶ್ಚಿತ ಉದ್ಯೋಗ ಮತ್ತು ಅಭಯ ಇಷ್ಟನ್ನು ಸರಕಾರವು ಕಡ್ಡಾಯವಾಗಿ ಒದಗಿಸಲೇಬೇಕು. ಎಂದೆನ್ನುತ್ತೇವಲ್ಲ. ಈ ವಿಷಯಗಳಲ್ಲಿ ಅಯೋಧ್ಯಾ ನಗರದ ಪ್ರಜೆಗಳು ನಿಶ್ಚಿಂತರಾಗಿದ್ದುದು ಕಂಡು ಬರುತ್ತದೆ. ಅದಕ್ಕೆಲ್ಲ ಪ್ರಜಾವತ್ಸಲರಾಗಿ ಶ್ರಮಪಡುವ ಸೂರ್ಯವಂಶೀಯರೆಂಬ ಅಯೋಧ್ಯೆಯ ರಾಜರೇ ಕಾರಣ. ಜನರ ಆರ್ಥಿಕ ಜೀವನವು ಕ್ರಮಬದ್ಧವಾದಾಗ ಅವರಿಗೆ ಧರ್ಮ ಬದ್ಧತೆ, ಪರಂಪರೆಯಲ್ಲಿ ಅಭಿಮಾನ ಮತ್ತು ಸಚ್ಚಾರಿತ್ರ್ಯಗಳು ಕಲಾತ್ಮಕವಾಗಿ ಅರಳುವುದು ಸ್ಪಷ್ಟವಿದೆ. ಈ ಕಾರಣಕ್ಕಾಗಿಯೆ ಪರಶುರಾಮನು ಬ್ರಾಹ್ಮಣದ್ವೇಷಿ ಕ್ಷತ್ರಿಯರ ನಿರ್ನಾಮ ಮಾಡುತ್ತ ಹೋದರೂ ಅಯೋಧ್ಯೆಯ ರಾಜಪುರುಷರ ಮೇಲೆ ಕೈಮಾಡದೆ ಬಿಟ್ಟನು. ಮತ್ತೆ ಅಯೋಧ್ಯೆಯಲ್ಲಿ ಧರ್ಮಭೀರುಗಳಾದ ದಶರಥನಂತಹ ರಾಜರು ತಮ್ಮ ಕುಲಪುರೋಹಿತ ಮತ್ತಿತರ ಋಷಿಗಳಿಗೆ ಸದಾ ವಿನಯತೋರಿ ನಡೆಯುತ್ತ, ಅಷ್ಟಮಂತ್ರಿಗಳ ಮತ್ತು ಲೋಕ ಸಭೆಯೆಂಬ ಪ್ರಜಾಪ್ರತಿನಿಧಿ ಸಭೆಯಿಂದ ಸಲಹೆಗಳನ್ನು ಪಡೆದು ಅಧೀನರಾಗಿದ್ದು ಆಳ್ವಿಕೆಯನ್ನು ಪ್ರಕಟಪಡಿಸುತ್ತಿದ್ದುದರಿಂದ ಮತ್ತು ಬೇಹಿನವರ (ಗೂಢಚಾರರು) ಮೂಲಕ ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳುತ್ತಿದ್ದುದರಿಂದ ಸಮರ್ಥ ಸರಕಾರವನ್ನು ಸ್ಥಾಪಿಸಿದ್ದರು. ಆಗ ಪ್ರಭುತ್ವವಿದ್ದರೂ ಕಾಣಿಸಿಕೊಳ್ಳದಂತೆ ಲಘುವಾಗಿತ್ತೆಂಬುದನ್ನು ಈ ಶ್ಲೋಕವು ಸಾರುತ್ತದೆ.

ನ ರಾಜ್ಯಂ ನ ಚ ರಾಜಾಸೀತ್ ನ ದಂಡಯೋ ನ ಚ ದಾಂಡಿಕಃ
ಧರ್ಮೇಣೈವ ಪ್ರಜಾಸ್ಸರ್ವಾನ್ ರಕ್ಷಂತಿ ಪರಸ್ಪರಮ್॥

ಅರ್ಥಾತ್ 'ಆಗ ರಾಜ್ಯವಿಲ್ಲ, ದಂಡನೆ ಇಲ್ಲ, ದಂಡಿಸಲ್ಪಡುವ ಅಪರಾಧಿಯಿಲ್ಲ. ಧರ್ಮಬಂಧದಿಂದಾಗಿ ಪ್ರಜೆಗಳು ಒಬ್ಬರು ಇನ್ನೊಬ್ಬರನ್ನು ಪರಸ್ಪರ ರಕ್ಷಿಸುತ್ತಿದ್ದರು'. ಈ ಮಾತನ್ನು ಅಯೋಧ್ಯಾ ನಗರದ ಆದರ್ಶ ಪ್ರಜಾರಾಜ್ಯಕ್ಕೆ ಅನ್ವಯಿಸಿ ಹೇಳಲಾಗಿದೆ. ಪ್ರಜೆಗಳು ಸ್ವತಃ ಬಾಧ್ಯತೆಯಿಂದ ನಡೆಯುವುದೇ ಆದರ್ಶ ರಾಜ್ಯ ಕ್ರಮ.

ಹಿಂದೆ ಸಗರನೆಂಬ ಸೂರ್ಯವಂಶೀ ರಾಜನಿಗೆ 'ಅಸಮಂಜ'ನೆಂಬ ಜ್ಯೇಷ್ಠ ಪುತ್ರನಿದ್ದು ಅವನು ಚಾರಿತ್ರ್ಯ ಭ್ರಷ್ಟನೆಂದು ಸಿದ್ಧವಾದಾಗ (ಅವನು ಚಿಕ್ಕ ಮಕ್ಕಳನ್ನು ಗೋಳು ಹೊಯ್ಯಿಸಿ ವಿನೋದ ಪಡುತ್ತಿದ್ದನೆಂಬ ಕಾರಣಕ್ಕಾಗಿ) ಸಗರನೇ ಆತನನ್ನು ತ್ಯಜಿಸಿ ರಾಜ ಭ್ರಷ್ಟನನ್ನಾಗಿ ಮಾಡಿದುದನ್ನು ರಾಮಾಯಣದಲ್ಲಿ ಹೇಳಿದೆ. ಇನ್ನು ರಘುವಂಶದಲ್ಲಿ ಗೋಪಾಲನೆ ಮಾಡಿ ಯಶಗಳಿಸಿದ ದಿಲೀಪ, ಬಹುಪ್ರಯತ್ನದಿಂದ ಹಿಮಾಲಯದಿಂದ ಗಂಗೆಯನ್ನು ಬಯಲಿಗೆ ಹರಿಸಿದ ಭಗೀರಥ' ಮತ್ತು ಮಹಾಯಜ್ಞಗಳನ್ನು ಮಾಡಿ ಪ್ರಸಿದ್ಧರಾದ ಇಕ್ಷ್ವಾಕು, ರಘು ಮುಂತಾದವರು ಇದ್ದುದನ್ನು ನಾವು ಮರೆಯಲಾಗುವುದಿಲ್ಲ. ಇಂಥ ರಾಜರನ್ನು ಪಡೆದ ಅಯೋಧ್ಯಾವಾಸಿಗಳು ಧನ್ಯರು.

ಅಯೋಧ್ಯಾಕಾಂಡದಲ್ಲಿ ಬರುವ ಕಥಾ ಪ್ರಸಂಗದಲ್ಲಿ ರಾಮನನ್ನು ಯುವರಾಜನನ್ನಾಗಿ ಮಾಡಬೇಕೆಂದು ರಾಮನ ತಂದೆ ದಶರಥನು ಅವನಿಗೆ ಉತ್ತರಾಧಿಕಾರವು ಸಹಜವಾಗಿದ್ದರೂ ಪ್ರಜೆಗಳ ಸಮ್ಮತಿ ಪಡೆಯಲು ಜನಪ್ರತಿನಿಧಿಗಳ ಸಭೆಯನ್ನು ಕರೆದನು. ಮತ್ತು ಪುರೋಹಿತ ವಸಿಷ್ಠರ ಸಲಹೆ ಪಡೆದನು. ದಶರಥನು ಲೋಕಸಭೆಯ ಅಧಿವೇಶನದಲ್ಲಿ ತಾನು ಜನಸ್ವಾಮಿಯಾಗಿ ತಾನು ಇಚ್ಛಿಸಿದ ರಾಮನನ್ನೇ ರಾಜನನ್ನಾಗಿ ಮಾಡುತ್ತೇನೆಂಬ ತನ್ನ ನಿರ್ಣಯವನ್ನು ಘೋಷಿಸಿ ಬಿಡಬಹುದಿತ್ತು. ಆದರೆ ಗಣತಂತ್ರ ರಾಜ್ಯದಲ್ಲಿ ರಾಜನು ಇಚ್ಛಾವರ್ತಿ ಆಗಬಾರದೆಂದು ಪ್ರಶ್ನಿಸುವವರು ಅಲ್ಪಮಂದಿಯಾದರೂ ಇದ್ದಾರೆಂಬುದನ್ನು ತಿಳಿದೇ ದಶರಥನು ಲೋಕ ಸಭೆಯಲ್ಲಿ ಆ ಬಗ್ಗೆ

ತನ್ನ ವಿಚಾರವನ್ನು ಮಂಡಿಸಿ ಸಭಾ ಪ್ರತಿನಿಧಿಗಳಿಗೂ ಸಾಮಂತರಿಗೂ ನಿರ್ಣಯವನ್ನು ಮಾಡಲು ಪೂರ್ಣ ಸ್ವಾತಂತ್ರ್ಯವಿದೆಯೆಂದು ಘೋಷಿಸುತ್ತಾನೆ. ಅವನ ಮಾತು ಹೀಗಿದೆ...

'ನಾನು ಈ ನಿರ್ಣಯವನ್ನು ವಿಚಾರಪೂರ್ವಕವಾಗಿ ಕೈಗೊಂಡಿದ್ದೇನೆಂದು ನಿಮಗೆ ನಿಜವಾಗಿ ಅನಿಸುವುದಾದರೆ ನಿಮ್ಮ ಸಮ್ಮತಿಯನ್ನು ನನಗೆ ನೀಡಬೇಕು. ಇಲ್ಲದಿದ್ದರೆ ನಾನು ಬೇರೆ ಏನು ಮಾಡಬೇಕೆಂದು ಹೇಳಬೇಕು. ನಾನು ಹೇಳಿದ ಮಾತು ನನಗೆ ಯೋಗ್ಯವೆನಿಸಿದ್ದು ಪ್ರಿಯವಾದರೂ ಅದು ನಿಮ್ಮ ಹಿತಕ್ಕೆ ಅನುಗುಣವಾಗಿಲ್ಲವೆಂದು ಅನಿಸಿದರೆ ನೀವು ಪ್ರತ್ಯೇಕ ನಿರ್ಣಯವನ್ನು ಸ್ವೀಕರಿಸಬಹುದು. ಸಾಧಕಬಾಧಕಗಳನ್ನು ಚೆನ್ನಾಗಿ ಪರಿಶೀಲಿಸಿ ನಿರ್ಣಯ ಕೊಡಬೇಕು

ಇಂದಿಗೆ ನಮ್ಮನ್ನಾಳುವ ಸರಕಾರಿ ಪಕ್ಷದ ನಾಯಕರು ವಿರೋಧಪಕ್ಷಕ್ಕೆ ಸೊಲ್ಲೆತ್ತಲಿಕ್ಕೇ ಬಿಡದಿರುವ ದಾಷ್ಟ್ಯ ಮತ್ತು ದೌರ್ಬಲ್ಯ ತೋರಿಸುವ ಈ ಸುಂದರ ವಿಧಾನವು ನಮಗೆ ಸನ್ಮಾರ್ಗ ದರ್ಶಕವಾಗಿರುತ್ತದೆ. ಹೀಗೆ ದಶರಥನು ಘೋಷಿಸಿದಾಗ ಸಭೆಯು ಒಕ್ಕೊರಲಿನಿಂದ 'ರಾಮ, ರಾಮನೇ ಸರಿಯಾದ ಅಯ್ಯ' ಎಂದು ಕೂಗಿ ಸಮ್ಮತಿ ನೀಡಿದುದು ದಶರಥನ ಅಯೋಧ್ಯೆಯ ಮತ್ತು ರಾಮ ಹಾಗು ದಶರಥರ ಮಹಾ ವ್ಯಕ್ತಿತ್ವಗಳನ್ನು ತೋರಿಸುತ್ತದೆ.

ಮುಂದೆ ರಾಮನ ಯುವರಾಜಾಭಿಷೇಕಕ್ಕೆ ಸಿದ್ಧತೆಯಾಗುವಾಗ ದಶರಥನ ಕಿರಿಯ ರಾಣಿ ಕೈಕೇಯಿಯು ಅವನಿಗೆ ತನ್ನ ಮಗನಾದ ಭರತನಿಗೆ ಯುವರಾಜಾಭಿಷೇಕವಾಗಬೇಕು ಎಂದು ಪಟ್ಟು ಹಿಡಿದು, ಅವನು ಹಿಂದೆ ತನಗೆ ಕೊಟ್ಟ ಅನುಗ್ರಹ ವಚನವನ್ನು ಅದಕ್ಕಾಗಿ ಬಳಸಿಕೊಂಡು ವಚನಬದ್ಧನಾಗಿ ಹಾಗೆ ಮಾಡದಿದ್ದರೆ ಅವನಿಗೆ ಪಾಪ ತಟ್ಟಬಹುದೆಂದು ಹೆದರಿಸುತ್ತಾಳೆ. ರಾಮನಿಗೆ ಇದು ತಿಳಿದು ದಶರಥನು ವಚನ ಭಂಗ ಸರ್ವಥಾ ಮಾಡಬಾರದೆಂದು ಪ್ರಜಾ ಸಮ್ಮತಿಯಿಂದ ರಾಜ್ಯ ಬಂದರೂ ರಾಜ್ಯ ತ್ಯಾಗ ಮಾಡಿ ಅಯೋಧ್ಯೆಯಿಂದ ಗಡಿಪಾರುಕ್ರಮ ತನಗೆ ತಾನೇ ವಹಿಸುತ್ತಾನೆ. ಅಯ್ಯೋಧ್ಯೆಯ ನಾಗರಿಕರಿಗೆ ಇದೆಲ್ಲ ತಿಳಿದಾಗ ಅವರು ರಾಜಾ ದಶರಥ ಮತ್ತು ಕೈಕೆಯರ ಮೇಲೆ ಸಿಟ್ಟಾಗುವುದಿಲ್ಲ. ಆದರೆ ತಮ್ಮ ಪ್ರೀತಿಗೆ ಪಾತ್ರನಾದ ರಾಮನನ್ನು ಬಿಟ್ಟುಗೊಡದೆ ಸರಯೂ ನದಿಯದಡದ ವರೆಗೆ ಅವನ್ನು ಹಿಂಬಾಲಿಸಿಕೊಂಡು ಬರುತ್ತಾರೆ. ಅಲ್ಲಿ ಅವರ ಕಣ್ಣು ತಪ್ಪಿಸಿ ಕೋಸಲದ ಗಡಿದಾಟಿ ಆತ ದನಾಂತರಕ್ಕೆ ಹೋಗಬೇಕಾಗುತ್ತದೆ. ದಶರಥ ಕೈಕೆಯವರ ಮೇಲೆ ಸಿಟ್ಟಾಗದೆ ಶಾಂತ ರೀತಿಯಲ್ಲಿ ವರ್ತಿಸುತ್ತಿದ್ದ ಪ್ರಜೆಗಳು ಪ್ರಶಂಸಾರ್ಹರೇ.

ತದನಂತರ ದಶರಥನು ವ್ಯಾಕುಲ ಮರಣ ಹೊಂದುತ್ತಾನೆ. ರಾಮನು ರಾಜ್ಯದ ಉತ್ತರಾಧಿಕಾರಿಯಾದರೂ ಅಯೋಧ್ಯೆಯಲ್ಲಿ ಅವನಿಲ್ಲದಿದ್ದಾಗ ಪುರೋಹಿತ ವಸಿಷ್ಠರ ಮುಂದೆ ಪ್ರಜೆಗಳು ಹೀಗೆ ನಿರ್ಣಯ ಮಂಡಿಸಿದುದುದು ಕಂಡು ಬರುತ್ತದೆ.

ನಮ್ಮ ಈ ರಾಷ್ಟ್ರವು ಅರಾಜಕತೆಯಿಂದ ವಿನಾಶ ಹೊಂದಬಾರದು. ಅದಕ್ಕಾಗಿ ತತ್‌ಕ್ಷಣ ಇಕ್ಷ್ವಾಕು ಕುಲದ ಯಾವನನ್ನಾದರೂ ಮುಖ್ಯನೊಬ್ಬನನ್ನು ವಿಧಿ ಪೂರ್ವಕ ರಾಜನನ್ನಾಗಿ ಮಾಡಬೇಕು'

ಆ ಸಂದರ್ಭದಲ್ಲಿ ರಾಮನ ಅನುಜರು ಉಪಸ್ಥಿತಿಯಲ್ಲಿ ಇಲ್ಲದಿದ್ದಾಗ ನಿರ್ವಾಹವಿಲ್ಲದೆ ಕೇಕಯ ದಲ್ಲಿದ್ದ ಭರತ ನನ್ನ ರಾಜನನ್ನಾಗಿ ಅವರು ತಿಳಿದದ್ದು ಸ್ಪಷ್ಟವಿದೆ. ಮುಂದೆ ಭರತನು ಅಯೋಧ್ಯೆಗೆ ಮರಳಿದಾಗ ತಂದೆ ತೀರಿಹೋದದ್ದೂ ಅದೇ ಕಾಲದಲ್ಲಿ ರಾಮನು ಅಯೋಧ್ಯೆ ಬಿಟ್ಟು ಹೋದದ್ದೂ ಸ್ವಲ್ಪ ಸ್ವಲ್ಪ ಅರಿವಾದಾಗ ಭರತನು ರಾಮನ ಚಾರಿತ್ರ್ಯದಲ್ಲಿ ಆಚಾತುರ್ಯ ಘಟನೆಯಾಯಿತೂ ಎಂಬ ಬಗ್ಗೆ ಸ್ವಲ್ಪ ಅನುಮಾನವನ್ನು ಕ್ಷಣಿಕವಾಗಿ ತಾಳಿದನೆಂದು ರಾಮಾಯಣದಲ್ಲಿ ಉಲ್ಲೇಖವುಂಟು. ರಾಮನ ವನವಾಸಕ್ಕೂ ದಶರಥನ ಚಿಂತಾಮರಣಕ್ಕೂ ತನ್ನ ತಾಯಿಗೆ ತನ್ನ ಬಗ್ಗೆ ರಾಜ್ಯದಾಸೆ ಇದ್ದುದೇ ಕಾರಣವೆಂದು ತಿಳಿದಾಗ ಅವನ ದುಃಖಕ್ಕೆ ಎಣೆಯಿಲ್ಲ. ಆತನು ಅಗ್ರಜ ರಾಮನೇ ರಾಜನಾಗಲು ಸದಾ ಬಯಸಿದ್ದವನು. ಆಗ ತಾನು ಈ ವಿಷಯದಲ್ಲಿ ನಿರಪರಾಧಿ ಯೆಂದೆ ಸಮರ್ಥಿಸಿಕೊಳ್ಳಲು ಭರದ್ವಾಜ, ಗುಹ, ರಾಮ ಲಕ್ಷ್ಮಣರೆದುರು ಮತ್ತು ಎಲ್ಲ ಜನಗಳೆದುರು ರಾಮನೇ ರಾಜನಾಗಬೇಕೆಂದು ಅವನನ್ನು ಕೇಳಿಕೊಳ್ಳುತ್ತಾನೆ.

ಪ್ರಜಾಧಿಕಾರದ ಪ್ರಾಬಲ್ಯವು ಇಲ್ಲಿ ಮಾತ್ರವೇ ಕಾಣುವುದಿಲ್ಲ. ಮುಂದೆ ಭರತನು ಅಯೋಧ್ಯೆಯನ್ನೇ ಪ್ರವೇಶಿಸದಂತೆ, ನಂದಿ ಗ್ರಾಮದಿಂದಲೇ ಹದಿನಾಲ್ಕು ವರುಷ ಕೋಸಲವನ್ನಾಳುವಂತೆ, ರಾಮನ ಪ್ರತೀಕ್ಷೆ ಮಾಡುವಂತೆ ಭರತನನ್ನು ಪ್ರೇರೇಪಿಸಿತು. ಭರತನೂ ಮಹಾ ತ್ಯಾಗಪುರುಷನಾಗಿದ್ದನೆಂದೂ ಹೇಳಬಹುದು. ಅಯೋಧ್ಯೆಯಲ್ಲಿ ರಾಜನಾಗಿರಲು ಅವನಿಗೆ ಸಾಧ್ಯವೆನಿಸಲಿಲ್ಲ.

ಪ್ರಜಾಧಿಕಾರದ ಪ್ರಖರತೆಯು ಉತ್ತರಕಾಂಡದಲ್ಲಿ ಕಂಡು ಬರುತ್ತದೆ. ಹತ್ತು ತಿಂಗಳ ಕಾಲ ರಾವಣನಂಥ ದುಷ್ಟನ ಅಧೀನವಿದ್ದ ನಂತರವು ಸೀತೆಯು ಅಯೋಧ್ಯೆಯ ರಾಣಿಯಾದಳಲ್ಲ. ಅವಳು ಶುದ್ಧಳೆಂದು ತಿಳಿವುದು ಹೇಗೆಂದು ಒಬ್ಬ ಯಃಕಶ್ಚಿತ್ ಅಗಸನು ಒಂದು ಅವಿವೇಕ ಕ್ಷಣದಲ್ಲಿ ಅಂದ ಮಾತನ್ನು ಗುಟ್ಟಾಗಿ ಕೇಳಿಸಿಕೊಂಡಾಗ ಇಂತಹದು ಜನಾಪವಾದವಾಗಿ ಹಬ್ಬಿದರೆ ರಾಜನನ್ನು ಉರುಳಿಸುವುದು. ಖಂಡಿತ, ಅದಕ್ಕೆ ಎಡೆಗೊಡಬಾರದೆಂದು ಸೀತಾ ಪರಿತ್ಯಾಗ ಮಾಡುತ್ತಾನೆ. ಆಕೆ ತುಂಬು ಗರ್ಭಿಣಿಯಾಗಿರು ವಾಗಲೂ ಎಂಬುದು ಪ್ರಜಾನಿಷ್ಠ ರಾಜಾರಾಮನ ಬಗೆಯನ್ನು ತಿಳಿಸುತ್ತದೆ. ಈ ರಾಮನ ಅಚಾತುರ್ಯವು ಅಯೋಧ್ಯೆಯು ಎಲ್ಲ ನಾಗರಿಕರ ಮನಸ್ಸನ್ನು ಕಲಕಿಬಿಡುತ್ತಾದಾದರೂ ಸೀತೆಯು ಎಲ್ಲಿರುವ ಳೆಂಬುದು ಯಾರಿಗೂ ತಿಳಿಯದಿದ್ದ ಸಂದರ್ಭದಲ್ಲಿ ಅವರು ನಿರುಪಾಯರಾಗಿ ರಾಣಿ ವಿರಹಿತ ರಾಮ ರಾಜ್ಯಕ್ಕೆ ಹೊಂದಿಕೊಳ್ಳುತ್ತಾರೆಂಬುದನ್ನು ರಾಮಾಯಣದಲ್ಲಿ ಹೇಳಿದೆ. ಅವರ ನಡೆಯುದು ಸಮರ್ಥನೀಯವಿದೆ.

ಅಯೋಧ್ಯೆಯ ಜನರು ಪ್ರಜೆಗಳಿಗಿರಬೇಕಾದ ಆದರ್ಶವನ್ನು ಕಾಯ್ದುಕೊಂಡಿದ್ದಾರೆ. ಇದಕ್ಕನ್ನಬೇಕು ಆದರ್ಶ ಅಯೋಧ್ಯಾ ನಗರವೆಂದು !

ಇಂತಹ ಅಯೋಧ್ಯೆ ಇಂದಿಗಿಲ್ಲವೆಂಬುದಕ್ಕೆ ವಿಷಾದಿಸಬೇಕಿದೆ. ಫೈಜಾಬಾದ್ ಜಿಲ್ಲೆಯಲ್ಲಿರುವ ಅಯೋಧ್ಯೆಯ ಅರ್ಧಪಾರ್ಶ್ವವು ದಿಕ್ಕು ಬದಲಿಸಿ ಹರಿದ ಸರಯೂ ನದಿಯಿಂದ ನಾಶಕ್ಕೆ ಒಳಗಾಗಿರುವುದು ನಿಜ. ಅಯೋಧ್ಯೆಯಲ್ಲಿ ರಾಮಜನ್ಮ ಸ್ಥಾನವೊಂದನ್ನು ಕಾಯ್ದುಕೊಂಡ ನಮ್ಮ ಜನರು ಆ ಸುಂದರ ನಗರವನ್ನು ವಿರೂಪಗೊಳಿಸಿ ಅಗಲ ಕಿರಿದಾದ ಓಣಿ ಬೀದಿಗಳು ಚಿಕ್ಕ ಗೂಡಂಗಡಿಗಳಂಥ ಗುಡಿಗಳಿಂದ ಅದರ ಭವ್ಯತೆಯನ್ನು ಧಿಕ್ಕರಿಸಿ ನಡೆದಿದ್ದಾರೆ. ಅತ್ಯಂತ ಹಳೆಯ ಪಟ್ಟಣ ಅಯೋಧ್ಯೆಯಲ್ಲಿ ಅಂತಃಕಲಹಗಳಿಂದ ಮನುಜರಿಂದಲೇ ಜರ್ಝರಿತವಾದ ಇಂದಿನ ಅಯೋಧ್ಯಾ ಪೇಟೆಯಲ್ಲಿ? ಅಂದಿನ ಸೂರ್ಯವಂಶ ಯೋಧರಾಜರ ತಳ ಈಗೆಲ್ಲಿದೆ?

•

## OBITUARY

We are deeply grieved to inform our members about the sad demise of Smt. Geetha Krishna on 9th March. She was an active member of our association and had many friends here who will miss her.

We pray that her family members are endowed with the strength to bear this loss .

May the departed soul rest in peace.

# ಬೀChi ಕನ್ನಡದ ದೀಕ್ಷೆ ಸ್ವೀಕರಿಸಿದ್ದು...

ಹುಬ್ಬಳ್ಳಿಯಲ್ಲಿ ಲೈಫ್ ಇನ್‌ಷೂರೆನ್ಸ್ ಕಂಪನಿಯೊಂದರ ಏಜೆಂಟರ ಆಫೀಸಿನಲ್ಲಿ ನವ್ಕರಿ, ಗಂಡ ಹೆಂಡತಿ ಇಬ್ಬರೇ ಸಂಸಾರ, ಆಫೀಸಿನಲ್ಲಿ ಕೆಲಸ ಏನೂ ಇಲ್ಲ ಅನ್ನುವಷ್ಟು ಕಡಿಮೆ, ಅಲ್ಲದೆ ನಾನೇ ಹಿರಿಯ ಅಧಿಕಾರಿ. ನನಗೊಬ್ಬ ಗುಮಾಸ್ತ, ಹೀಗಾಗಿ ಆಫೀಸಿನ ವೇಳೆಯಲ್ಲಿ ಹೊರಬಂದು ಸುತ್ತಾಡಲು ಸವ್ಡಾಯಿತು. ಇದಿರು ಸಾಲಿನಲ್ಲಿಯೇ ಇದ್ದ ಸಾಹಿತ್ಯ ಭಂಡಾರದ ಶ್ರೀ ಮಂಗಳೂರು ಗೋವಿಂದರಾಯರ ಪರಿಚಯವಾಯಿತು. ಅವರ ಅಂಗಡಿಯಲ್ಲಿ ಕುಳಿತು ಹರಟುವುದು ಕುಟ್ಟುವುದು ನನ್ನ ನಿತ್ಯದ ಕಾರ್ಯಕ್ರಮ. ಅದು ಬರೀ ಕನ್ನಡ ಪುಸ್ತಕದ ಅಂಗಡಿಯಲ್ಲವೇ? ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ ''ನಾನು ಪುಸ್ತಕಗಳನ್ನು ಕೈಯಿಂದಲೂ ಮುಟ್ಟದೆ ಮಾಂಸದ ಅಂಗಡಿಯಲ್ಲಿ ಕೂಡುವ ಮಹಾ ಮಡಿವಂತ ಬ್ರಾಹ್ಮಣನಂತೆ ಕುಳಿತು ಎದ್ದು ಹೋಗುತ್ತಿದ್ದೆ. ಇಂಗ್ಲೀಷ್ ಬಾರದವರಷ್ಟೆ ಕನ್ನಡ ಓದುತ್ತಾರೆ ಎಂಬ ಭಾವನೆ ನನಗಾಗ. ನಾನು ರಸ್ತೆಯ ಅಂಚಿನಲ್ಲಿ ಮಾರುತ್ತಿದ್ದ ಹಳೆಯ ಇಂಗ್ಲೀಷ್ ಪುಸ್ತಕಗಳನ್ನು ಹೆಚ್ಚಾಗಿ ರೈಡರ್ ಹ್ಯಾಗರ್ಡ್‌ನ 'ರೋಮ್ಯಾಂಟಿಕ್' ಕಾದಂಬರಿಗಳನ್ನು, ಅಂಥವನ್ನೇ ಮೆಚ್ಚುವ ವಯಸ್ಸು ನನಗಾಗ (ಮದುವೆಯಾದ ಹೊಸತು - ಇನ್ನೂ ಮಕ್ಕಳಿಲ್ಲ) ಓದುತ್ತಿದ್ದೆ. ಸಾಹಿತ್ಯ ಭಂಡಾರದಲ್ಲಿದ್ದುವೆಲ್ಲ ಬರೀ ಕನ್ನಡ ಪುಸ್ತಕಗಳು, ಅವುಗಳಲ್ಲಿ ಎದ್ದು ಕಾಣುತ್ತಿದ್ದುವು ಶ್ರೀ ರಂ. ರಾ. ದಿವಾಕರರ 'ಅಂತರಾತ್ಮನಿಗೆ' ಮುಂತಾದ ಅಧ್ಯಾತ್ಮದ ಗ್ರಂಥಗಳು. ಪಿಂಚಿನಿಯಾದ ಸಿಹಿ ಮೂತ್ರದ ಕಾಯಿಲೆಯ ಅಥವಾ ಹೆಂಡತಿ ಸತ್ತ ಗೊಡ್ಡಿನ ಮುದುಕರು ಓದುವ ಆ ಪುಸ್ತಕಗಳು 'ಪಹಿಲೀ ಪಚ್ಚೀಸ್'ನಲ್ಲಿದ್ದ ನನಗೆ ಕಸವಲ್ಲದೆ ಮತ್ತೇನು?

ಒಂದು ಸಂಜೆ ನನ್ನೆಂಡತಿಯೊಂದಿಗೆ ವಾಕಿಂಗ್ ಹೊರಟಿದ್ದಾಗ - ಆಗ ಆ ಸಂಪ್ರದಾಯವಿತ್ತು, ಅದು ಮಧ್ಯೆ ಪೂರ್ತಿನಿಂತು ಹೋಗಿ ಮೂವತ್ತು ವರ್ಷಗಳ ನಂತರ ಈಗ ಮತ್ತೆ ಸುರುವಾಗಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ - ಸಾಹಿತ್ಯ ಭಂಡಾರದತ್ತ ಬೆರಳು ತೋರಿಸಿ, ''ಇದೇ ನನ್ನ ಆಫೀಸು. ಈ ಪುಸ್ತಕ ಅಂಗಡಿಯಲ್ಲಿಯೇ ಹೆಚ್ಚು ಸಮಯ ಕೊಡತ್ತೇನೆ'', ಎಂದು ಹೇಳಿದೆ. ನನ್ನ ಹೆಂಡತಿ ವಿಚಾರಿಸಿದಳು : ''ಏನು ಪುಸ್ತಕಗಳಿವೆ ಅಲ್ಲಿ? ತೆಲುಗು ಪುಸ್ತಕಗಳಿವೆಯೆ?''

''ಇದು ಹುಬ್ಬಳ್ಳಿ'' ಎಂದು ನಕ್ಕು ಹೇಳಿ, ''ಸುಡುಗಾಡು ಕನ್ನಡ ಪುಸ್ತಕ ಮಾರತಾರೆ'' ಎಂದು ತಾತ್ಸಾರಭಾವದಿಂದ ಹೇಳಿದೆ. ಇದನ್ನು ನೆನಪಿನಲ್ಲಿಟ್ಟುಕೊಂಡಿದ್ದ ನನ್ನ ಹೆಂಡತಿ ಒಂದು ದಿನ : ''ಮಧ್ಯಾಹ್ನ ಕಳೆಯೋದೇ ಕಷ್ಟ ಆಗ್ತದೆ. ಯಾವದಾರೆ ಒಂದು ಕನ್ನಡ ಪುಸ್ತಕ ತಂದು ಕೊಡ್ರಿ'', ಎಂದು ಎಂದು ಕೇಳಿದಳು. ಮರುದಿನ ನನ್ನ ಮಿತ್ರರಾದ ಗೋವಿಂದರಾಯರಿಗೆ ಹೇಳಿದೆ : ''ಒಂದು ಯಾವ್ದಾರೆ ನಿಮ್ಮ ಏನದದ ಕತೀ ಬುಕ್ಕಾನಂತೆ ಕೊಡ್ರೆಪಾ ! ನನ್ನ ಹೆಣ್ತಿ ಬಡಕೊಳ್ಳಿಕ್ಕೆ ಹತ್ಯಾಳೆ, ಅಮ್ಯಾಲೆ ಪರತು ತಂದುಕೊಡತೀನಿ''

ಮಂಗಳೂರು ಗೋವಿಂದಾರಾಯರು ಸೌಜನ್ಯ ಮೂರ್ತಿ ಮುಖದಲ್ಲಿ ಬೇಸರವನ್ನು ತೋರಿಸಲಿಲ್ಲ ಮಾತ್ರವಲ್ಲ, ಮುಸಿ ಮುಸಿ ನಗುತ್ತ ಕವಾಟದಿಂದ ಒಂದು ಪುಸ್ತಕವನ್ನು ಹೊರತೆಗೆದು ಕಾಗದದಲ್ಲಿಟ್ಟುಕೊಟ್ಟರು. ಅದಾವ ಪುಸ್ತಕವೆಂದು ನಾನೇಕೆ ನೋಡಲಿ ? ಅಂಚೆ ಜವಾನನ ಕಾರ್ಯವನ್ನು ಮಾಡಿದೆ. ಎರಡನೆ ದಿನ ಮನೆಗೆ ಹೋದಾಗ ನನ್ನ ಹೆಂಡತಿ ಪುಸ್ತಕ ಓದುತ್ತಾ ಅಳುತ್ತಿದ್ದಳು. 'ಕನಡಾ ಓದಲಿಕ್ಕೆ ಬರೋದಿಲ್ಲಾ ಅಂತ ಅಳ್ತಿದೇನೆ?'' ಎಂದು ತಮಾಷೆ ಮಾಡಿದೆ.

ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಯಾವ ಮಹಾಭೇದವಿದೆ? ಒಂದರ ಲಿಪಿಯನ್ನು ಸರಾಗವಾಗಿ ಓದಬಹುದು ಕಣ್ಣೊರಸಿಕೊಳ್ಳುತ್ತ ನನಗೆ ಹೇಳಿದಳು : ''ಭಾಳಾ ಛೇಷ್ ಅದರೀ ಪುಸ್ತಕ, ನೀವೂ ಓದಬೇಕು ಇದನ್ನೊಮ್ಮೆ''

ಸಾಹಿತ್ಯದ ಬಗ್ಗೆ ಹೈಸ್ಕೂಲ ಹೊಸ್ತಿಲನ್ನೂ ತುಳಿಯದ ಈ ಆಚಾರ್ಯರ ಮಗಳ ಅಭಿಪ್ರಾಯಕ್ಕೆ ನಾನು ಯಾವ ಗೌರವವನ್ನು ಕೊಡಲಿ ? ''ನೀನಂತೂ ಓದಿ ಮುಗಿಸು'', ಎಂದೆಂದು ಊಟಕ್ಕೆ ಅಣಿಯಾದೆ.

ಆ ಪುಸ್ತಕವನ್ನು ಓದಿ ಮುಗಿಸಿದನಂತರ, ನಾನದನ್ನು ಓದಲೇಬೇಕೆಂದು ನನ್ನ ಹೆಂಡತಿ ನನಗೆ ಒತ್ತಾಯ ಮಾಡಿ ದುಂಬಾಲು ಬಿದ್ದಳು. ಹೆಂಡತಿಗಾಗಿ ಯಾರಾರೋ ಏನೇನನ್ನೋ ಮಾಡಿದ್ದಾರೆ. ಆರನೆಯ ಜಾರ್ಜ್ ಬ್ರಿಟಿಷ್ ಸಾಮ್ರಾಟ ಸಿಂಹಾಸನವನ್ನೇ ತ್ಯಜಿಸಿಲ್ಲವೆ? ಮದುವೆಯಾದವನು ಎಂತೆಂತಹ ತ್ಯಾಗಗಳಿಗೆ ಸಿದ್ಧನಾಗಬೇಕಾಗುತ್ತದೆಂದು ಊಹಿಸುವುದೂ ಅಸಾಧ್ಯ. ಸಾಹಿತ್ಯವೆಂದರೆ ಇಂಗ್ಲೀಷ್ ಸಾಹಿತ್ಯ ಒಂದೇ ಎಂದು ಭಾವಿಸಿದ್ದ ನಾನು ಕನ್ನಡ ಪುಸ್ತಕವನ್ನು ಓದಲು ಒಪ್ಪುವ ಮಟ್ಟಕ್ಕೆ ಇಳಿದೆ. ಎಂತಹ ಪತನ.

ಮರುದಿನ ರೇಲ್ವೇ ಪ್ರಯಾಣವಿತ್ತು, ಟ್ರೇನಿನಲ್ಲಿ ಓದಿದರಾಯಿತು ಎಂದುಕೊಂಡೊಯ್ದೆ. ರೈಲಿನಲ್ಲಿ ಕನ್ನಡ ಪುಸ್ತಕ ಕೈಲಿ ಹಿಡಿದು ಕುಳಿತರೆ ನನ್ನ ಮಾನ ಉಳಿಯುತ್ತದೆಯೇ? ಪಕ್ಕದಲ್ಲಿಯ ಪ್ರಯಾಣಿಕ ನಾನು ಹಾಸಿದ ಹೋಲ್ಡಾಲ್ ಮೇಲೆಯೇ ಕೂಡುತ್ತಾನೆ, ಬೀಡಿ ಕೈಲಿ ಹಿಡಿದು ಬೆಂಕಿಪೆಟ್ಟಿಗೆಯನ್ನೂ ಕೇಳುತ್ತಾನೆ. ಇಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯನ್ನು ಕೈಲಿ ಹಿಡಿದು ಅದರಲ್ಲಿ ಕನ್ನಡ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಲಾರಂಭಿಸಿದೆ ಆರಂಭಿಸಿದುದಷ್ಟೇ ನನಗೆ ಗೊತ್ತು, ಮಧ್ಯೆ ಅದೆಷ್ಟೋ ಬಾರಿ ಕಣ್ಣು ತೇವವಾದುವೋ, ಅಷ್ಟು ಸಲ ಹೃದಯ ಮಿಡಿಯೋ ನನಗೆ ಲೆಕ್ಕ ಸಿಕ್ಕಲಿಲ್ಲ. ಪುಸ್ತಕ ಮುಗಿದ ಮೇಲೆಯೇ ನನಗೆ ಎಚ್ಚರ. ಆ ಪುಸ್ತಕ ಯಾವುದು? ಸಂಧ್ಯಾರಾಗ ಗ್ರಂಥಕರ್ತ ಅ.ನ. ಕೃಷ್ಣರಾಯ. ಅಂತೂ ಪರವಾ ಇಲ್ಲ, ಕನ್ನಡದಲ್ಲೂ ಒಳ್ಳೊಳ್ಳೆಯ ಬರಹಗಾರರು ಇದ್ದಾರೆ ಎಂದು ನನಗೆ ನಾನೇ ಹೇಳಿಕೊಂಡೆ.

ಆ ಶುಭಮೂಹೂರ್ತದಲ್ಲಿ ನಾನು ಕನ್ನಡದ ದೀಕ್ಷೆ ಸ್ವೀಕರಿಸಿದೆ..

- ಬೀChi

(ಆತ್ಮಕಥೆ - 'ನನ್ನ ಬಯಾಗ್ರಫಿ'ಯಲ್ಲಿ)

## ಕವಿಯಾಗುವ ಹಾಡು - ಪಾಡು !!

ಕನ್ನಡ ಯಾವ ಪತ್ರಿಕೆ ತೆರೆದರೂ
ದುಂಡಿರಾಜರದ್ದೇ ಹನಿ ಗವಿತೆಗಳು !
ಅಲ್ಲಲ್ಲಿ ಕಂಗೊಳಿಸುವವು ಇವೇ ಗವನಗಳು
ರಾಜನ ಶಿರದ ಮೇಲಿನ ಕಿರೀಟದಂತೆ !
ಎಲ್ಲರೂ ಕವಿಯಾಗಲಾರರೆಂದು
ಗೊತ್ತಿತ್ತು ನನಗೆ
ಏನಾಗಿದ್ದರೂ ಒಮ್ಮೆ ಕವಿಯಾಗಬೇಕೆಂದು
ಬೇತಾಳ ಹಠ ಎನಗೆ !
ಬರೋಬ್ಬರಿ ಒಂದು ಡಜನ್ ಹಾಳೆ,
ಮೂರು ಪೆನ್ನು - ಖಡ್ಗಗಳ ಹಿಡಿದು
ಸಾಹಿತ್ಯ ಹೊಲದಲಿ ಕೃಷಿ ಮಾಡುವ
ಆಧುನಿಕ ಕೃಷಿಕನ ಹುಮ್ಮಸ್ಸು ನನ್ನದು !
ಮೂರು ಕಪ್ ಚಹಾ ಕುಡಿದೆ
ಪ್ಲೇಟು ತುಂಬ ಹುರಿಗಡಲು ಮುಕ್ಕಿದೆ
ಸ್ಫೂರ್ತಿಗಾಗಿ ತಲೆ ಕೊಡವಿದೆ.
ಮೇಲೆ ನೋಡಿ ಹಲ್ಲಿ ಹುಡುಕಿದೆ !!
ಬರೆದದ್ದು - ಹರಿದದ್ದು
ಮತ್ತೇ ಬರೆದದ್ದು...
ಒಂದು ಕವಿತೆಯೂ ಹುಟ್ಟಲಿಲ್ಲ.
ಹಾಳೆಯಲಿ ಬೆಂಕಿ ಕಾಯಿಸುವುದು ತಪ್ಪಲಿಲ್ಲ !!
ಕೊನೆಗೂ ನಾ ಕವಿಯಾಗಲಿಲ್ಲ !
ಒಂದು ಹನಿಗವಿತೆಯೂ ಜನಿಸಲಿಲ್ಲ !

- ಶೋಭಾ ಪ್ರಮೋದ್

# South Indian Recipes for Ugadi

*from Smt. Kamala Narsiwodeyar's book*

## Mysore Masala dosa

(golden brown dosa with red chutney masala smeared inside!

Main ingredients:

| | |
|---|---|
| Rice | - 3 cups |
| Black gram dhal | - 1 cup |
| Flattened rice | - 1 cup |
| Bengal gram dhal | - $\frac{1}{2}$ cup |
| Fenugreek seeds | - $\frac{1}{2}$ cup |
| Salt | - to taste |

***Masala ingredients:***

| | |
|---|---|
| Cloves | - 3 nos |
| Cardamom | - 1 no |
| Cinnamon piece | - 1 inch piece |
| Bengal gram dhal | - 2 tbsp |
| Red chillies | - 2 nos |
| Dry coconut (grated) | - 5 tbsp |

***Preparation Method :***

Sock al the main ingredients for 3 hrs. Then grind to obtain smooth batter and leave it for fermenting. Add salt to the batter.

Grind the masala ingredients adding very little water

Use ghee to shallow fry the dosa after spreading the batter on the pan. Spread the the masala on the inner side of the dosa.

When the dosa becomes golden brown in colour and starts coming up at the edges, put potato curry (bhaji) inside the dosa and make it into a tringular shape. Serve hot with chutney.

## Kadale bele obbattu

***Ingredients:***

For the inner filling:

| | |
|---|---|
| Bengal gram dhal | - 1 cup |
| Jaggery (grated) | - 1 cup |

***For the outer covering:***

| | |
|---|---|
| Semolina (fine) | - 1 cup |
| Turmeric | - a pinch |
| Pure Ghee | - 2 tbsp |
| Salt & Oil | - (or as required) |

***Preparation method:***

***For the inner filling:***

Cook bengal gram dhal with little water. Drain it. After it cools down grind with jaggery powder to make the inner filling.

***For the outer covering:***

Take semolina in a vessel, add turmeric, ghee, salt, oil (2 tbsp), adequate water make soft dough. Keep this dough soaked in oil for 3 hrs.

After 3 hrs the dough becomes soft. Knead the dough till it becomes soft enough to stretch. Again pour some more oil on to this dough. Make small balls of the dough. Take a ball, flatten with hand on a plastic sheet to a round shape (poori). Now keep the inner filling in the middle of the poori and cover it from all sides to make a ball. Flatten the ball with hand (use plastic sheets to flatten the obbattu). Cook these obbattus without oil on a heated tava. Serve hot with ghee topping.

---

## ಸುತ್ತಮುತ್ತ

### ಶ್ರದ್ಧಾಂಜಲಿ
### ಶ್ರೀಮತಿ ಜಮುನಾ ಉಚ್ಚಿಲ್

ಚುಟುಕು ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮತ್ತವರ ಘಾಟ್‌ಕೋಪರ್ ಶಾಖೆಯು ಸಂಯುಕ್ತವಾಗಿ ಕೀರ್ತಿಶೇಷ ಜಮುನಾ ಅವರ ಶ್ರದ್ಧಾಂಜಲಿ ಸಭೆಯನ್ನು ಚೆಂಬೂರಿನ ನ್ಯೂ ಮಾಡೆಲ್ ಇಂಗ್ಲೀಷ್ ಶಾಲೆಯ ಸಭಾಗೃಹದಲ್ಲಿ ಏರ್ಪಡಿಸಿತ್ತು.

ಶ್ರೀಮತಿ ಜಮುನಾ ಉಚ್ಚಿಲ್ ಅವರು ಮುಂಬಯಿ ಮಹಾನಗರದ ಪಾಲಿಕೆಯ ಕನ್ನಡ ಶಾಲೆಗಳಲ್ಲಿ ಮುಖ್ಯಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಶ್ರೀಮತಿ ಜಮುನಾ ಉಚ್ಚಿಲ್ ಕರ್ತೃತ್ವಶಕ್ತಿಯಿಂದ ಕನ್ನಡಿಗರ ಸಮಸ್ತ ಶಿಕ್ಷಕರ ಸಮುದಾಯದಲ್ಲೇ ಎದ್ದು ಕಾಣುವ ವ್ಯಕ್ತಿತ್ವ ಆಗಿದ್ದರು. ಉತ್ತಮ ಆಡಳಿತಗಾರ್ತಿಯಾಗಿ, ಕರ್ತವ್ಯನಿಷ್ಠರಾಗಿ, ಸಜ್ಜನಿಕೆಯ ಸೌಜನ್ಯ ಮೂರ್ತಿಯಾಗಿ, ಕುಟುಂಬ ವತ್ಸಲೆಯಾಗಿ ಜಮುನ ಅವರದ್ದು ಆದರ್ಶ ಜೀವನವಾಗಿತ್ತು. ಬಡವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವನ್ನೀಯುವುದು ಉತ್ತಮ ಧರ್ಮವೆಂದರಿತು ಮ.ನ.ಪಾ. ಶಾಲೆಗಳ ಕನ್ನಡ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಸೇವೆ ಸಲ್ಲಿಸಿದರು. ತನ್ನ ಶಾಲೆಯನ್ನು ಆದರ್ಶ ಶಾಲೆಯನ್ನಾಗಿ ರೂಪಿಸಿ, ದಾನಿಗಳಿಂದ ಧನ ಸಂಗ್ರಹಿಸಿ, ತನ್ನ ಸ್ವಂತ ಹಣವನ್ನು ಸೇರಿಸಿ ಮ.ನ.ಪಾ. ಶಾಲೆಗಳ ಕನ್ನಡದ ಬಡ ವಿದ್ಯಾರ್ಥಿಗಳನ್ನು ನಿರಂತರ ಪ್ರೋತ್ಸಾಹಿಸಿದ್ದರು.

ಡಾ. ಸಂಜೀವ ಶೆಟ್ಟಿ, ಕೆ.ಪಿ. ಪ್ರಭಾಕರ, ಡಿ.ಕೆ. ಕುಂದರ್, ವಾಮನ ಕೆ. ಶೆಟ್ಟಿ, ಕೆ. ಆರ್. ಆಚಾರ್ಯ, ಪ್ರಕಾಶ ಎಲ್. ಶೆಟ್ಟಿ, ನಳಿನಿ ಕೋಟ್ಯಾನ್, ಸುಮನ್ ಚಿಪ್ಳೂಣ್‌ಕರ್, ಸನತ್‌ಕುಮಾರ್ ಜೈನ್, ಬಿ. ಬಾಲಚಂದ್ರ ರಾವ್, ಲಕ್ಷ್ಮೀ ಉಚ್ಚಿಲ್, ಪುಷ್ಪಾ ಉಚ್ಚಿಲ್, ಲೀಲಾವತಿ ಶೆಟ್ಟಿ, ಸುಂದರ ಕುಂಬತ್ತೂರು, ಮೇರಿ ಪಿಂಟೋ ಮುಂತಾದವರು ಜಮುನಾ ಉಚ್ಚಿಲ್‌ರ ಕ್ರಿಯಾಶೀಲತೆಯನ್ನು ಕೊಂಡಾಡಿ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

### ದಿಲ್ಲಿಯಲ್ಲಿ ಎಪ್ರಿಲ್ 9ರಿಂದ 22ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

ದಿಲ್ಲಿಯಲ್ಲಿ ಎಪ್ರಿಲ್ 9ರಿಂದ 22ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಆರಂಭವಾಗಲಿದೆ. ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಸಮ್ಮೇಳನದ ವಿವರ ಇಲ್ಲಿ ಪ್ರಕಟಿಸಿರುವರು.

'ದೆಹಲಿ ಕನ್ನಡಿಗ' ಪತ್ರಿಕೆಯ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಮಾನವೀಯ ಹಕ್ಕುಗಳ ರಾಷ್ಟ್ರೀಯ ಆಯೋಗದ ಸದಸ್ಯರೂ, ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಾಧೀಶರೂ ಆದ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲಂ ಅವರು ಉದ್ಘಾಟಿಸಲಿದ್ದು, ಲೇಖಕರೂ, ತಿರುಪತಿ ಸಂಸ್ಕೃತ ವಿದ್ಯಾಪೀಠದ ಕುಲಾಧಿಪತಿಗಳೂ, ವಿದೇಶಾಂಗ ಮಂತ್ರಾಲಯದ ಮಾಜಿ ಮಹಾ ನಿರ್ದೇಶಕರೂ ಆದ ಡಾ. ವಿ. ಆರ್. ಪಂಚಮುಖಿ ಅವರು ಅಧ್ಯಕ್ಷತೆ ವಹಿಸಲಿರುವುದು.

ಕೇಂದ್ರ ಸಚಿವ ಆಸ್ಕರ್ ಫೆರ್ನಾಂಡಿಸ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು.

ಪ್ರಶಸ್ತಿ ವಿತರಣೆ : ಸಮ್ಮೇಳನದಲ್ಲಿ ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಗುವುದು.

ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಕನ್ನಡಕ್ಕೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾನ್ಯತೆ ದೊರಕಿಸಿ ಕನ್ನಡಿಗರಿಗೆ ಎಲ್ಲಾ ರಂಗಗಳಲ್ಲಿ ಸರಿಯಾದ ನ್ಯಾಯ ಸಿಗುವಂತೆ ಮಾಡುವುದೇ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ ಎಂದುಸಾಮಗ ಅವರು ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

No. TECH/47-202/MBI/2003-05
Date of Posting : 10-04-2005

# MSIL, MUMBAI Invites....

Bounded by Goa in the North & Kerala in the South Karnataka has an unexplored virgin & breathtaking beautiful coastline of 320 Kms with palm fringed beaches of white sands. Nearly 10-12 rivers merge into the sea along these beaches forming mangroves, backwaters, lagoons and islands.

We invite private sectors and Hoteliers to set up quality resorts and hotels along the coast. The department will extend all the assistance to the entrepreneurs by way of getting approaches, land acquisitions if necessary and provide incentives available under the Tourism Policy.

The Kannadigas living outside Karnataka can help in this venture to promote our state as a premier coastal travel destination.

*Contact :*

**The Commissioner of Tourism**

**Govt. of Karnataka**

**M/s. Karnataka State Tourism**

**Development Corporation (KSTDC)**

49, 2nd Floor, Kanija Bhavan, Race Course Road, Bangalore-560 001.

Tel. : 080 2235 2828

E-mail : d_tourism@vsnl.com

**Mr. Mohan M. Naik**

**MYSORE SALES INTERNATIONAL LTD.**

Arun Chambers, Next to Air Condition Market,
Tardeo Main Road, Tardeo, Mumbai-400 034.

Tel. : 2352 1304 (Telefax)

Mobile : 98200 59680/98201 59325

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938